ತೀವ್ರತೆಯನ್ನು ಗಮನಿಸಿದಂತೆ ನನಗೆ ಕಾಣುವುದಿಲ್ಲ. ಸ್ವಾಮಿ, ಶ್ರೀ ಕೃಪಲಾನಿಯವರು ಒಂದು ಸಾರಿ :—

"Today when people are dying inch by inch, it is our duty to ring the Bell of Revolt."

ಎಂದು ಹೇಳಿದ್ದಾರೆ. ಸರ್ಕಾರದವರು ವಿರೋಧಪಕ್ಷದವರ ಅಭಿಪ್ರಾಯವನ್ನು ಅಲ್ಲಗಳೆದಿದ್ದಾರೆ. ಆದ್ದರಿಂದ ಈ ಸರ್ಕಾರದ ನೀತಿಯನ್ನು ವಿರೋಧಿಸಿ ಪ್ರತಿಭಟಿಸಿ ನಾವು ಸಭಾ ತ್ಯಾಗ ಮಾಡುತ್ತೇವೆ. ಸರ್ಕಾರದವರು ಪಬ್ಲಿಕ್ ವರ್ಕ್ಸ್ ಇಲಾಖೆಯ ಬೇಡಿಕೆಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುವುದಾದರೆ ನಾವು ಅದನ್ನು ಬಹಿಷ್ಕರಿಸಬೇಕಾಗುತ್ತದೆಂದು ಹೇಳಿ ನಾವು ಈ ಸಭೆಯಿಂದ ಹೊರಗೆ ಹೋಗುತ್ತೇವೆ.

(At this stage the Opposition members staged a walk-out)

Mr. SPEAKER.—The Hon'ble Minister may move the Demands.

BUDGET ESTIMATES FOR 1966-67—DEMANDS FOR GRANTS

DEMAND NO. 6.—OTHER TAXES—ADMINISTRATION.

Sri VEERENDRA PATIL (Minister for Public Works).—Sir, on the recommendation of the Governor of Mysore, I beg to move :

"That a sum not exceeding Rs. 12,26,000 be granted to the Government to defray the charges which will come in course of payment druing the financial year for the period ending 31st day of March 1967 in respect of 'Other Taxes and Duties'."

Along with this Demand. Demand No. 30A, 31, 32, 43, 47, 48 and 50 are deemed to have been moved and are open for discussion.

Mr. SPEAKER.—Demands moved : On the recommendation of the Governor of Mysore,

"That a sum not exceeding Rs. 12,26,000 be granted to the Government to defray the charges which will come in course of payment during the financial year for the period ending 31st day of March 1967 in respect of 'Other Taxes and Duties'."

Along with this Demand, Demand No. 30A, 31, 32, 43, 47, 48 and 50 are deemed to have been moved and are open for discussion.

ಶ್ರೀ ಎಸ್. ಎಂ. ಗುರ್ರೆಡ್ಡಿ (ಮುದ್ದೆಬಿಹಾಳ್).—ಮಾನ್ಯ ಅಧ್ಯಕ್ಷರೆ, ಪಿ.ಡಬ್ಲ್ಯು. ಇಲಾಖೆಯ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಬೇಡಿಕೆಗಳಲ್ಲಿ ಮೊದಲನೆಯದಾದ ಸಾರ್ವಜನಿಕ ಕಾಮಗಾರಿಗಳ ಬಗ್ಗೆ ಹೇಳುವುದಾದರೆ, 3ನೇ ಯೋಜನೆಯಲ್ಲಿ ಸರಕಾರದವರು ಇದಕ್ಕಾಗಿ ಸುಮಾರು ಒಂಬತ್ತು ಕೋಟಿಗಳನ್ನು ಒದಗಿಸಿದ್ದರು ಆದರೆ ಸರಕಾರದವರು ವಹಿಸಿದ ಕೆಲಸಗಳನ್ನು ನೋಡಿದರೆ ಒಂಬತ್ತು ಕೋಟಿಗಿಂತಲೂ ಮೀರಿ ಸುಮಾರು ಹದಿನೆಂಟು ಕೋಟಿಯಷ್ಟು ಹಣ ಈಗಾಗಲೇ ಖರ್ಚಾಗಿದೆ. ಇದು ನಮ್ಮ ರಾಜ್ಯ ಸರಕಾರ ಕೇಂದ್ರ ಸರಕಾರದ ಸಹಾಯದಿಂದ ಇಷ್ಟು ಪ್ರಗತಿಯನ್ನು ಸಾಧಿಸಲಕ್ಕೆ ಸಾಧ್ಯವಾಗಿದೆ; ಎಂದು ಹೆಮ್ಮೆಯಿಂದ ಹೇಳಬೇಕಾಗಿದೆ. ಹಾರಿಗೆ ಸಂಪರ್ಕ (ಕಮ್ಯೂನಿಕೇಷನ್ನು) ಒಂದು ರಾಜ್ಯದ ಪ್ರಗತಿಗೆ ಬಹಳ ಮುಖ್ಯವಾದುದು. ರೋಡುಗಳನ್ನು ಮಾಡುವುದೇ ಅಲ್ಲದೆ ಪೋರ್ಟುಗಳನ್ನು ಕೂಡ ಮಾಡಬೇಕಾಗಿದೆ. ಅದರಂತೆ ನಾನಾ ಕಡೆಗಳಲ್ಲಿ ರಸ್ತೆಗಳನ್ನು ನಿರ್ಮಿಸಿ ಸಾರಿಗೆ ಸಂಪರ್ಕಕ್ಕೆ ಬಹಳ ಮಹತ್ವ ಕೊಟ್ಟಿದ್ದಾರೆ. ನಮ್ಮ ಮೈಸೂರಿನ ಸಾರಿಗೆ ಸಂಪರ್ಕ ಸಮರ್ಪಕವಾಗಿ ಕೆಲಸ

(ಶ್ರೀ ಎಸ್. ಎಂ. ಗುರ್ರೆಡ್ಡಿ)

ಮಾಡಿದೆ, ಭಾರತ ದೇಶ (ಆರ್ ಇಂಡಿಯಾ) ಅವರೇಜನ್ನು ನೋಡಿದರೆ ಒಂದು ನೂರು ಐವತ್ತು ಮೈಲಿ ರಸ್ತೆಯಲ್ಲಿ 40—41 ಮೈಲಿ ರಸ್ತೆಯೆ 40—41 ಪಾಯಿಂಟು ಮೈನೂರು ರಾಜ್ಯ ಆರ್ ಇಂಡಿಯಾ ಮಟ್ಟಕ್ಕೆ ಸಮೀಪಿಸಿದೆ ಎಂದು ಇಲ್ಲಿ ಹೆಮ್ಮೆಯಿಂದ ಹೇಳಬೇಕಾಗಿದೆ. ಈಗ ಸರಕಾರದವರು ಖರ್ಚು ಮಾಡುವ ಹಣ ಕೇವಲ ಕೆಲವು ಭಾಗಗಳಲ್ಲೇ ಹೆಚ್ಚಾಗಿ ಖರ್ಚಾಗುತ್ತಿದೆ. ಇದು ಆಗಬೇಕಾದುದು ಕೇವಲ ಹಿಂದುಳಿದ ಪ್ರದೇಶಗಳಲ್ಲಿ ಮಾತ್ರ. 1962 ರಿಂದ ಅಂದರೆ ತುರ್ತು ಪರಿಸ್ಥಿತಿಯಿಂದಾಗಿ ಸರಕಾರ ಹೆಚ್ಚು ಹಣ ಈ ರೋಡುಗಳ ಕಾಮಗಾರಿ ಹಾಗೂ ಇನ್ನಿತರ ಕೆಲಸಗಳಿಗಾಗಿ ನಾನು ಕೇಳುತ್ತಬರುತ್ತಿದ್ದರೂ ಹೆಚ್ಚು ಹಣ ಖರ್ಚು ಮಾಡಲು ಸಾಧ್ಯವಾಗಲಿಲ್ಲ ಎಂದು ಇಲ್ಲಿ ಹೇಳಬೇಕಾಗಿದೆ. ಬಿಜಾಪುರ ಜಿಲ್ಲೆ ಬಗ್ಗೆ ಹೇಳುವುದಾದರೆ ನಮ್ಮಲ್ಲಿ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಹೋಗುವಾಗ ಸರಿಯಾದ ರಸ್ತೆಗಳಿಲ್ಲ. ಈ ಜಿಲ್ಲೆಯಲ್ಲಿ ಒಂದೂ ಸರ್ವ ಋತು ರಸ್ತೆಗಳಿಲ್ಲ ಎಂದರೆ ಆರ್ ವೆದರ್ ರೋಡುಗಳಲ್ಲಿ ಒಂದಾದರೂ ಮಾಡಬೇಕೆಂದು ಮಾನ್ಯ ಪಿ.ಡಬ್ಲ್ಯು. ಇರಾಖಾ ಮಂತ್ರಿಗಳಲ್ಲಿ ಮನವಿ ಮಾಡಿಕೊಂಡಿದ್ದೆವು. ಆದರೆ ಇನ್ನೂ ಈ ಜಿಲ್ಲೆಯ ಕಡೆಗೆ ಲಕ್ಷ ಕೊಟ್ಟಿಲ್ಲ. ಮಳೆಗಾಲದಲ್ಲಿ ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಹೋಗಬೇಕೆಂದರೆ ಬಹಳ ತೊಂದರೆಯಾಗುತ್ತದೆ. ಈ ಜಿಲ್ಲೆಯ ಕಡೆಗೆ ಸರಕಾರ ಇನ್ನಾದರೂ ಗಮನ ಕೊಡಬೇಕು. ಹೈದರಾಬಾದು ಕರ್ನಾಟಕದ ಭಾಗ ಬಹಳ ಹಿಂದುಳಿದಿತ್ತು. ಈಗ ಉಳಿದ ಜಿಲ್ಲೆಗಳ ಮಟ್ಟಕ್ಕೆ ಬರುತ್ತಿದೆ. ಆನಂತರ ನಮ್ಮ ಬಿಜಾಪುರ ಜಿಲ್ಲೆಗಿಂತ ಅಲ್ಲಿನ ಮೈಲೇಜು ಹೆಚ್ಚು ಎನ್ನುವುದು ಗೊತ್ತಾಗುತ್ತದೆ. ಹಳೇ ಮೈಸೂರು ಭಾಗಗಳಲ್ಲಿ ನಮ್ಮ ಜಿಲ್ಲೆಗಿಂತಲೂ ರೋಡು ಮೈಲೇಜು ಸ್ವಲ್ಪ ಜಾಸ್ತಿಯಾಗಿದೆ. ಆರ್ ಇಂಡಿಯಾ ಅವರೇಜಿಕ್ಕೆ ಹಳೇ ಮೈಸೂರು ಸ್ವಲ್ಪ ಏರಿದೆ. ಸರಕಾರದವರು ಕಮ್ಯೂನಿಕೇಶನಕ್ಕೆ ಮುಖ್ಯ ಗಮನ ಕೊಡಬೇಕಾದುದು ಅಗತ್ಯ. ದೇಶಕ್ಕೆ ತುರ್ತು ಪರಿಸ್ಥಿತಿ ಒದಗಿದ್ದರೂ ರೋಡುಗಳ ನಲುವಾಗಿ ಕರ್‌ವರ್ಟುಗಳ ನಲುವಾಗಿ ಹಣ ಖರ್ಚು ಮಾಡಕೂಡದು ಎನ್ನುವ ಉದ್ದೇಶವಿದ್ದರೂ ಕಮ್ಯೂನಿಕೇಶನ್‌ದ ಮಹತ್ವವನ್ನರಿತು ರಾಜ್ಯ ಸರಕಾರದವರು ರೋಡುಗಳ, ಸೇತುವೆಗಳ ಹಾಗೂ ಕರ್‌ವರ್ಟುಗಳನ್ನು ಮಾಡುವುದಕ್ಕಾಗಿ ಒಂದೇ ಸಮವಾಗಿ ಖರ್ಚು ಮಾಡುತ್ತ ಬರುತ್ತಿದ್ದಾರೆ. ಇಷ್ಟೊಂದು ಹೆಮ್ಮೆಯ ಮಾತು ಎಂದು ಇಲ್ಲಿ ಹೇಳಬಹುದು. ನಾಲ್ಕನೇ ಯೋಜನೆಯಲ್ಲಿ ಹಿಂದಿನ ಮೂರನೇ ಯೋಜನೆಗಿಂತ ಹೆಚ್ಚು ಹಣವನ್ನು ಈ ಬಾಬಿಗಾಗಿ ಒದಗಿಸುವವರಿದ್ದಾರೆ ಅಂದರೆ ಈಗಿನ ಕ್ಕಿಂತಲೂ ಮೂರು ಆಥವಾ ನಾಲ್ಕು ಪಟ್ಟು ಹೆಚ್ಚಿನ ಹಣವನ್ನು ರೋಡುಗಳಿಗೆ ಖರ್ಚು ಮಾಡುವ ಉದ್ದೇಶವಿದೆ. ಮೂರನೇ ಯೋಜನೆಯಲ್ಲಿ ಸಾಕಷ್ಟು ಹಣ ಒದಗಿಸದೇ ಇರುವುದರಿಂದ ಹೆಚ್ಚು ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ರಸ್ತೆಗಳ ನಿರ್ಮಾಣ ಮಾಡುವಾಗ ತಾರತಮ್ಯವಿಲ್ಲ. ಇದರ ಬಗ್ಗೆ ನಮ್ಮ ಪಿ.ಡಬ್ಲ್ಯು ಇರಾಖಾ ಮಂತ್ರಿಗಳು ಯಾವ ಭಾಗದಲ್ಲಿ ರೋಡು ಮೈಲೇಜು ಹೆಚ್ಚಾಗಿದೆಯೋ ಆ ಭಾಗವನ್ನು ಬಿಟ್ಟು ಬೇರೆ ಭಾಗಗಳಲ್ಲಿ ಅಂದರೆ ಹಿಂದುಳಿದ ಭಾಗಗಳಲ್ಲಿ ಹೆಚ್ಚು ರೋಡುಗಳ ಕೆಲಸ ಮಾಡುವ ವ್ಯವಸ್ಥೆ ಮಾಡಬೇಕೆಂದು ನಾನು ಇಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರಂತೆ ಬ್ರಿಡ್ಜಗಳ ಹಾಗೂ ಕರ್‌ವರ್ಟು ಕೆಲಸಗಳನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ನ್ಯಾಷನರ್ ಹೈ ವೇ ರಸ್ತೆಯ ವಿಚಾರ ನಮ್ಮ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಬಹಳ ಕಡಿಮೆ ಇದೆ. ಅಕ್ಕ ಪಕ್ಕದ ರಾಜ್ಯಗಳಿಗಿಂತ ನಮ್ಮ ರಾಜ್ಯದಲ್ಲಿ (ರಾಷ್ಟ್ರೀಯ ಹೆದ್ದಾರಿಗಳು ನ್ಯಾಷನರ್ ಹೈ ವೇ ರೋಡುಗಳ) ಬಹಳ ಕಡಿಮೆಯಾಗಿದೆ. ಆದುದರಿಂದ ನಮ್ಮ ರಾಜ್ಯದಲ್ಲೂ ಕೇಂದ್ರ ಸರಕಾರದವರು ನ್ಯಾಷನರ್ ಹೈ ವೇ ರೋಡುಗಳನ್ನು ಹೆಚ್ಚು ಸಂಖ್ಯೆಯಲ್ಲಿ ತೆಗೆದುಕೊಳ್ಳುವಂತೆ ಅವರಲ್ಲಿ ಒತ್ತಾಯ ಮಾಡಬೇಕು. ನ್ಯಾಷನರ್ ಹೈ ವೇ ನಂಬರು 13 ಎನ್ನುವ ರಸ್ತೆಯನ್ನು ಮಂಜೂರು ಮಾಡರಾಗಿದೆ. ಆದರೆ ಅದರ ಕಾರ್ಯ ಅಷ್ಟು ತ್ವರಿತವಾಗಿ ನಡೆಯುತ್ತಿಲ್ಲ. ಷೋರಾಪುರದಿಂದ ಚಿತ್ರದುರ್ಗಕ್ಕೆ ಹೋಗುವ ರೋಡನ್ನು ನ್ಯಾಷನರ್ ಹೈ ವೇ ರೋಡು ನಂಬರು 13 ಎಂದು ಹೇಳುತ್ತಾರೆ. ಬೀಜಾಪುರ ಜಿಲ್ಲೆಯ ಮೇಲಿಂದ ಮೂಲಕ ಹಾಯ್ದು ಹೋಗಬೇಕಾಗಿದೆ. ಆದರೆ ಇದು ಎಲ್ಲಿ ಹಾಯ್ದು ಹೋಗಬೇಕು ಎನ್ನುವುದರ ಬಗ್ಗೆ ಇನ್ನೂ ಯಾವ ನಿರ್ಣಯವೂ ಆಗಿಲ್ಲ. ಈ ನಿರ್ಣಯ ತ್ವರಿತವಾಗಿ ಆಗುವಂತೆ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಬೇಕೆಂದು ಮತ್ತು ತೀವ್ರ ಕೆಲಸಚಾಲು ಮಾಡಲೂ ಕೇಳುತ್ತಾರೆ ಎಂದು ಆಸೆ ಮಾಡುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿ ಒಂದು ಜಿಲ್ಲೆಯಿಂದ ಒಂದು ಜಿಲ್ಲೆಗೆ ಹಾಗೂ ಒಂದು ತಾಲ್ಲೂಕಿನಿಂದ ಒಂದು ತಾಲ್ಲೂಕಿಗೆ ಹೋಗಬೇಕಾದರೆ ಸರಿಯಾದ ಆರ್ ವೆದರ್ ರೋಡು ಯಾವುದೂ ಇಲ್ಲ ಎಂದು ನಾವು ಮುಂಬಯಿ ಸರಕಾರದಲ್ಲಿದ್ದಾಗಲೂ ಹೇಳುತ್ತ ಬಂದಿದ್ದೆವು. ಇಲ್ಲೂ ಅದನ್ನೆ ಹೇಳುತ್ತ ಬರುತ್ತಿದ್ದೇವೆ. ಇದರ ಬಗ್ಗೆ ಈಗಲಾದರೂ ಸರಕಾರ ಲಕ್ಷ ಕೊಡಬೇಕೆಂದು ಹೇಳುತ್ತೇನೆ. ಅಲ್ಲದೆ ಇಲ್ಲಿರುವ ಹಳ್ಳಿಗಳಿಗೆ ಕರ್‌ವರ್ಟುಗಳನ್ನು ಬೇಗನೆ ಮಾಡಿಸಬೇಕು ಎಂದು ಕೇಳುತ್ತಿದ್ದೇನೆ. ಆದರೆ ಈಚೆಗೆ ಒಂದೆರಡು ಬ್ರಿಡ್ಜಗಳ ಕೆಲಸವನ್ನು

4-30 P.M.

ತೆಗೆದುಕೊಂಡಿದ್ದು ನ್ಯಾತ್ಯವಾಗಿದೆ. ಆದರೆ ಈ ಒಂದೆರಡರಿಂದ ಆ ಜಿಲ್ಲೆಯ ಸ್ಥಿತಿ ಸುಧಾರಿಸುವುದಿಲ್ಲ. ಆದಕಾರಣ ವಿಜಾಪುರ ಜಿಲ್ಲೆಗೆ ಹೆಚ್ಚು ಹೆಚ್ಚು ಬ್ರಿಡ್ಜಸ್ ಮತ್ತು ಕಲ್ವರ್ಟ್ಸ್‌ಗಳ ಅಗತ್ಯವಿದೆ ಅದನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಾ ಇದ್ದೇನೆ. ಮೊದಲು ರೋ ಲೆವಲ್ ಕಾಸ್‌ವೇ ಮಾಡಿದ ಪರಿಣಾಮವಾಗಿ ರಸ್ತೆಗಳೂ ಸುಧಾರಿಸಲಿಲ್ಲ ಅಲ್ಲದೆ ಅದರಿಂದ ಎಷ್ಟೋ ನಾಗುವಳಿಯಾಗುವಂತಹ ಭೂಮಿ ಉಪಯೋಗಿದೆ ಅದಕಾರಣ ಅವುಗಳನ್ನು ತೆಗೆಸಿ ಕಲ್ವರ್ಟ್ಸ್ ಅಥವಾ ಬ್ರಿಡ್ಜಸ್‌ನ್ನು ಕಟ್ಟಿಸುವುದು ಬಹಳ ಮಹತ್ವದ್ದು. ಅತ್ತ ಕಡೆಗೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ಪೋರ್ಟ್ಸ್ ವಿಚಾರದಲ್ಲಿ ಹೇಳಬೇಕಾದರೆ ಕಳೆದ ನಾಲ್ಕು-ಐದು ವರ್ಷಗಳಲ್ಲಿ ಬಹಳ ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದೇವೆ. ಕೇಂದ್ರ ಸರ್ಕಾರದವರೂ ಕೂಡ ನಮಗೆ ಹೆಚ್ಚಿನ ಸಹಾಯವನ್ನು ನಲ್ಲಿಸಿದ್ದಾರೆ. ಅದಕ್ಕಾಗಿ ಅವರನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕಾಗಿದೆ. ಮಂಗಳೂರಿನ ಕೆಲಸ ಬಹಳ ತ್ವರಿತವಾಗಿ ಸಾಗುತ್ತ ಇದೆ. ಅದರಂತೆ ಎಲ್ಲಾ ಬಂದರುಗಳನ್ನೂ ಅಭಿವೃದ್ಧಿ ಮಾಡಲಿಕ್ಕೆ ಹೆಚ್ಚಿನ ಸ್ಕೋಪು ಸಿಕ್ಕಿದ್ದು ಹೆಮ್ಮೆಯ ವಿಷಯ. ವೆಸ್ಟ್ ಕೋಸ್ಟ್ ರೋಡು ಬಹಳ ದೊಡ್ಡ ರಸ್ತೆಯಿದ್ದು ಲಕ್ಷಾಂತರ ರೂಪಾಯಿಗಳನ್ನು ಅಲ್ಲಯೇ ಖರ್ಚು ಮಾಡಲಿಕ್ಕೆ ಹೊರಟಿದ್ದೇವೆ. ಮಾಡಲು ಅಡ್ಡಿಯಿಲ್ಲ ಆದರೆ ಉಳಿದ ಭಾಗಗಳನ್ನು ಕಡೆಗಾಣಿಸಿ ಓರ್ ಕ್ಯಾರೀಯಿಂಗ್ ರೋಡ್ಸ್ ಅಥವಾ ವೆಸ್ಟ್‌ಕೋಸ್ಟ್ ರೋಡನ್ನು ಮಾಡುತ್ತಾ ಹೋದರೆ ಉಳಿದ ಭಾಗಗಳವರಿಗೆ ತೊಂದರೆಯಾಗುತ್ತದೆ ಆದ್ದರಿಂದ ಉಳಿದ ಪ್ರದೇಶಗಳನ್ನು ಮರೆಯಬಾರದು ಎಂದು ಕೇಳಿಕೊಳ್ಳುತ್ತೇನೆ. ವೆಸ್ಟ್‌ಕೋಸ್ಟ್ ರೋಡ್‌ಗೆ ಕೇಂದ್ರ ಸರ್ಕಾರದವರು ಹೆಚ್ಚಿನ ಸಹಾಯವನ್ನು ಒದಗಿಸಿಲ್ಲ. ಕೇಂದ್ರ ಸರ್ಕಾರದವರೇ ಹೆಚ್ಚಿನ ಸಹಾಯ ಕೊಡುತ್ತಾರೆ ಎಂದು ಮೊದಲು ಈ ರಸ್ತೆಯನ್ನು ಚಾಲು ಮಾಡುವಾಗ ಹೇಳುತ್ತಿದ್ದರು. ಆದರೆ ಈಗ ನಮ್ಮ ಸರ್ಕಾರದವರೇ ಅದರ ಮೇಲೆ ಹೆಚ್ಚಿನ ರೊಕ್ಕ ಹಾಕುವಂತಹ ಪ್ರಸಂಗ ಬಂದಿದೆ. ಏಕೆಂದರೆ ಕೆಲಸ ಚಾಲೂ ಆದಮೇಲೆ ಅದನ್ನು ನಿಲ್ಲಿಸಲಕ್ಕೆ ಬರುವುದಿಲ್ಲ. ಕಡಿಮೆ ಇದ್ದಾಗಲು ಕೂಡ ಅದನ್ನು ತೆಗೆದುಕೊಂಡದ್ದು ಅಷ್ಟು ನ್ಯಾತ್ಯವಾದದ್ದಲ್ಲ. ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡಿ ಆ ರಸ್ತೆಗೆ ಹಣ ಒದಗಿಸುವ ಜವಾಬ್ದಾರಿಯೆನ್ನು ಅವರಿಗೇ ವಹಿಸಿಕೊಟ್ಟು ಆ ರಸ್ತೆಯನ್ನು ಇಂಪ್ರೂವ್ ಮಾಡಲಿಕ್ಕೆ ಮನನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ವಿದ್ಯುಚ್ಛಕ್ತಿ ವಿಷಯಕ್ಕೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಶರಾವತಿ ಯೋಜನೆಯಿಂದ ನಮ್ಮ ರಾಜ್ಯಕ್ಕೆ ಹೆಚ್ಚು ವಿದ್ಯುಚ್ಛಕ್ತಿ ದೊರೆಯುತ್ತದೆನೋ ನಿಜ. ರಾಜ್ಯದ ಬೇಡಿಕೆ ಹೆಚ್ಚುವುದರಿಂದ ಕೇವಲ ಈ ಒಂದು ಶರಾವತಿಯಿಂದ ಪೂರ್ತಿಸಲಿಕ್ಕೆ ಸಾಧ್ಯವಿಲ್ಲ. ನಮಗೆ ನೈಸರ್ಗಿಕ ಒದಗಿಸಿಕೊಟ್ಟಂಥ ಸೌಭಾಗ್ಯ ಇನ್ನೊಂದು ಇದೆ. ಅದು ಕಾಳಿ ನದಿ. ಅದರಿಂದ ನಮ್ಮ ಇಡೀ ರಾಜ್ಯದ ವಿದ್ಯುಚ್ಛಕ್ತಿ ಕೊರತೆಯನ್ನು ಹೋಗಲಾಡಿಸಿಕೊಳ್ಳಲಿಕ್ಕೆ ಸಾಧ್ಯವಿದೆ. ಆದ್ದರಿಂದ ಕಾಳಿ ನದಿ ಯೋಜನೆಯನ್ನು ತೀವ್ರ ತೆಗೆದುಕೊಳ್ಳುವಂತೆ ಪ್ರಯತ್ನ ಮಾಡಬೇಕು ಹಣದ ನಲುವಾಗಿ. ಕೇಂದ್ರ ಸರ್ಕಾರದವರ ಮೇಲೆ ಹೆಚ್ಚಿನ ಒತ್ತಾಯ ಮಾಡಿಯೇ ತೀರಬೇಕೆಂದು ನಮ್ಮ ಸರ್ಕಾರದವರಿಗೆ ನಾನು ಮನವಿ ಮಾಡಿಕೊಳ್ಳುತ್ತಾ ಇದ್ದೇನೆ. ಕಾಳಿ ನದಿ ಯೋಜನೆಯನ್ನು ಕೇಂದ್ರದವರೇ ವಹಿಸಿಕೊಳ್ಳಬೇಕೆಂದರೆ ಕೇಂದ್ರ ಸರ್ಕಾರದವರು ಒಪ್ಪಿಕೊಳ್ಳಬಹುದು ಅದರೆ ಅವರಿಗೆ ಕಾಳಿ ನದಿ ಯೋಜನೆಯ ನಲುವಾಗಿ ಹಣದ ಸಹಾಯ ಮಾಡುವಂತೆ ಕೇಳಬೇಕು. ಕಾಳಿ ನದಿ ಯೋಜನೆಯನ್ನು ಅವರಿಗೆ ಬಿಟ್ಟಕೊಡುವುದು ಮಹತ್ವದ್ದಲ್ಲ. ಬಿಟ್ಟುಕೊಟ್ಟರೆ ಆದರಿಂದ ನಮಗೆ ಸರ್ಕಾರಕ್ಕೆ ಹಾನಿ ಇದೆ, ಬರುವ ಉಪ್ಪನ್ನ ಬರುವುದಿಲ್ಲ ಕಾಳಿ ನದಿ ಯೋಜನೆಯಿಂದ ಹೆಚ್ಚು ವಿದ್ಯುಚ್ಛಕ್ತಿ ದೊರೆಯುವದರಿಂದ ಬೇರೆ ರಾಜ್ಯಗಳಿಗೂ ಕೂಡ ಅದನ್ನು ಕೊಟ್ಟು ಹೆಚ್ಚಿನ ಹಣ ಪಡೆಯಲಿಕ್ಕೆ ಸಾಧ್ಯವಿದೆ. ಆದ ಕಾರಣ ಕಾಳೀ ನದಿ ಯೋಜನೆಗೆ ಕೇಂದ್ರ ಸರ್ಕಾರದವರು ಸಹಾಯ ಮಾಡಬೇಕೆಂದು ಅದನ್ನು ಅವರಿಗೇ ವಹಿಸಿಕೊಡಬೇಕೆಂಬುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಶರಾವತಿ ವಿದ್ಯುಚ್ಛಕ್ತಿ ಒದಗಿದ ಮೇಲೂ ಕೆಲವೊಂದು ಜಿಲ್ಲೆಗಳಲ್ಲ ವಿದ್ಯುಚ್ಛಕ್ತಿ ಪುರವನೆಯನ್ನು ಇನ್ನೂ ಒದಗಿಸಿಕೊಟ್ಟಿಲ್ಲ, ವಿಜಾಪುರ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಇಲ್ಲಿಯವರೆಗೂ ತನಕ ವಿದ್ಯುಚ್ಛಕ್ತಿಯ ಅಭಾವವನ್ನು ಆ ಜಿಲ್ಲೆ ಅನುಭವಿಸುತ್ತಲೇ ಇದೆ. ಮೊನ್ನೆ ಮೊನ್ನೆ ಮಹಾಲಿಂಗಪುರ ಮುಂತಾದ ಕೆಲವು ತಾಲೂಕುಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ. ಆದರೆ ಜಿಲ್ಲಾ ಸ್ಥಳಗಳಲ್ಲೇ ವಿದ್ಯುಚ್ಛಕ್ತಿ ಮುಟ್ಟದೇ ಇರುವುದು ದುರದೃಷ್ಟ. ಆದ ಕಾರಣ ಮಾನ್ಯ ಮಂತ್ರಿಗಳು ಆದಷ್ಟು ತೀವ್ರ ವಿಜಾಪುರ ಜಿಲ್ಲೆಯ ಕೆಲವೊಂದು ತಾಲ್ಲೂಕು ಸ್ಥಳಗಳಿಗೆ ಮತ್ತು ವ್ಯವಸಾಯದಿಂದ ಮುಂದುವರಿದಂತಹ ಸ್ಥಳಗಳಿಗೆ ಅಂದರೆ ಹೆಚ್ಚು ಭಾವಿ, ನದಿ, ಹಳ್ಳಗಳಿದ್ದಂತ ಮತ್ತು ಎಲ್ಲ ಹೆಚ್ಚು ಕೈಗಾರಿಕೆಗಳು ಇವೆಯೋ ಆ ಸ್ಥಳಗಳಿಗೆ ಆದರೂ ವಿದ್ಯುಚ್ಛಕ್ತಿ

(ಶ್ರೀ ಎಸ್. ಎಂ. ಗುರೆಡ್ಡಿ)

ಯನ್ನು 1966ನೇ ಇಸವಿಯೊಳಗಾಗಿ ಪುರವಠೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ. ಈಗ ಪಂಪ್ ಸೆಟ್ಟುಗಳನ್ನು ಹೆಚ್ಚಾಗಿ ಡೀಸೆರ್ ಮೇಲೆ ಕೊಡುತ್ತಾ ಇದ್ದೀರಿ. ಅದು ಬಹಳ ಖರ್ಚಿನದಾಗಿದೆ. ಆದಕಾರಣ ವಿದ್ಯುಚ್ಛಕ್ತಿ ಕೊಟ್ಟು ಅದಕ್ಕೆ ತಕ್ಕ ಪಂಪ್ ಸೆಟ್ಟುಗಳನ್ನು ಎಲ್ಲೆಲ್ಲಿ ಬಾವಿಗಳು ಇವೆಯೋ ಅಲ್ಲಿಗೆ ಹೆಚ್ಚು ವಿದ್ಯುಚ್ಛಕ್ತಿಯನ್ನು ಪುರವಠೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ಸಾರ್ವಜನಿಕ ಜನಾರೋಗ್ಯ ರಕ್ಷಣೆಯ ದೃಷ್ಟಿಯಿಂದ ನೋಡುವುದಾದರೆ ವಿಜಾಪುರ ಜಿಲ್ಲೆಯಲ್ಲಿ ಕೇವಲ ಮೂರು-ನಾಲ್ಕು ಸ್ಥಳಗಳಲ್ಲಿ ರೂರಲ್ ವಾಟರ್ ಸಪ್ಲೈಯ ಸ್ಕೀಮಿನಿಂದ ರೂರಲ್ ಹೆಲ್ತ್ ಸೆಂಟರುಗಳನ್ನು ನೀಡದ ಕುಡಿಯುವ ನೀರಿನ ಕೆಲಸ ಪ್ರಾರಂಭವಾದದ್ದು ಕಂಡು ಬರುತ್ತದೆ. ನನ್ನ ತಾಲ್ಲೂಕು ಮಟ್ಟಿಗೆ ಹೇಳುವುದಾದರೆ ಅಲ್ಲಿ ಒಂದು ಕೂಡ ತೆಗೆದುಕೊಂಡಿಲ್ಲ. ಇದನ್ನು ನೋಡಿದರೆ ನಮ್ಮ ತಾಲ್ಲೂಕವನ್ನು ಕಡೆಗಣಿಸಿದ್ದು ಸ್ಪಷ್ಟವಾಗಿ ಕಂಡುಬರುತ್ತಾ ಇದೆ. ನಮ್ಮಲ್ಲಿ ಕುಡಿಯುವ ನೀರಿನ ಅಭಾವ ಹೆಚ್ಚಾಗಿದೆ ಕನಿಷ್ಠ ಪಕ್ಷ ಎರಡು-ಮೂರು ಸಾವಿರ ಜನ ನಂಖ್ಯೆ ಇರತಕ್ಕ ಹಳ್ಳಿಗಳಲ್ಲಿ ಯಾದರೂ ಕುಡಿಯುವ ನೀರಿನ ಅಭಾವ ನೀಗಿಸಬೇಕೆಂದು ವಿನಂತಿಸುವೆ. ಪ್ರತಿ ವರ್ಷ ಬೇಸಿಗೆ ಕಾಲದಲ್ಲಿ ಎರಡು ಮೂರು ತಿಂಗಳು ನೀರಿನ ಬೇನೆಯಿಂದ ಜನ ಬಳಲುತ್ತಿರುತ್ತಾರೆ. ಈಗಿನ ಕಾಲದಲ್ಲೂ ನಾರಿನ ಬೇನೆಯಿಂದ ಜನ ಬಳಲುತ್ತಾ ಇರುವುದನ್ನು ನೋಡುವುದು ಸಮಂಜಸವಲ್ಲ. ಆದ್ದರಿಂದ ಜನಾರೋಗ್ಯ ದೃಷ್ಟಿಯಿಂದ ಎಲ್ಲ ನೀರಿನ ಅಭಾವ ಇದೆ ಅಂತಹ ಕಡೆ ಟ್ಯಾಪ್ ವಾಟರನ್ನು ಒದಗಿಸುವ ಒಂದು ಯೋಜನೆಯನ್ನು ತಾವು ಆ ಭಾಗದಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ರಸ್ತೆಗಳ ಸಂಬಂಧವಲ್ಲಿ ಇನ್ನೊಂದು ವಿಷಯವನ್ನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುವು ದೇನೆಂದರೆ ಉಳಿದ ಭಾಗದಲ್ಲಿ ಎಷ್ಟು ಡಾಂಬರ್ ರಸ್ತೆಗಳನ್ನು ಮಾಡಿದ್ದೀರೋ ಅಷ್ಟು ಡಾಂಬರ್ ರೋಡುಗಳನ್ನು ವಿಜಾಪುರ ಜಿಲ್ಲೆಯಲ್ಲಿ ಮಾಡಿರುವಿರೋ ಹೇಗೆ ನೋಡಿರಿ. ನೂರ ಮೈಲುಗಳಲ್ಲಿ ಒಂದು ಮೈಲು ಕೂಡ ವಿಜಾಪುರ ಭಾಗದಲ್ಲಿ ಆಗಿಲ್ಲ ಎಂದು ಹೇಳುತ್ತೇನೆ. ಆದಕಾರಣ ಅತ್ತ ಕಡೆಗೆ ಹೆಚ್ಚು ಲಕ್ಷ್ಯವಹಿಸಬೇಕು. ರೂರಲ್ ಕಮ್ಯೂನಿಕೇಷನ್ ಕೆಲವೊಂದು ತಾಲ್ಲೂಕುಗಳಲ್ಲಿ 100–200 ಮೈಲು ಆಗಿದೆ. ಮತ್ತೆ ಕೆಲವೊಂದು ತಾಲ್ಲೂಕುಗಳಲ್ಲಿ ಐದು ಮೈಲು ಕೂಡ ಆಗಿಲ್ಲ. ಈ ರೀತಿ ಆಗಿರುವುದನ್ನು ಹೋಗತಾಡಿಸಲು ಬರುವ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಭಾಗ ರೂರಲ್ ಕಮ್ಯೂನಿಕೇಷನ್ಸ್ ದೃಷ್ಟಿಯಿಂದ ಹಿಂದುಳಿದಿದೆಯೋ ಅದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ಮತ್ತೊಮ್ಮೆ ತಮ್ಮನ್ನು ಕೇಳಿಕೊಂಡು ಒಂದೆರಡು ಮಾತುಗಳನ್ನಾಡಲು ಅವಕಾಶಕೊಟ್ಟಂತಹ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಸುಶೀರಾ ಬಾಯಿ ಪಾ (ಬಾಗೇವಾಡಿ).—ಮಾನ್ಯ ಸಭಾಪತಿಯವರೇ ಈ ಡಿಮ್ಯಾಂಡ್‌ನ್ನು ಸ್ವಾಗತಿಸಿ ಶ್ರೀಮಾನ್ ಗುರೆಡ್ಡಿಯವರು ಹೇಳಿದ ಪ್ರಕಾರ ನಾನು ಒಂದೆರಡು ಸಲಹೆಗಳನ್ನು ಮಾನ್ಯ ಮಂತ್ರಿಗಳಿಗೆ ಕೊಡುತ್ತೇನೆ. ನಮ್ಮ ಜಿಲ್ಲೆಯಲ್ಲಿ 13ನೇ ನಂಬರ್ ನ್ಯಾಷನರ್ ಹೈವೇ ಅದೆ. ಎಂಟು ವರ್ಷದಿಂದ ಒಂದು ಜೋಡ್ಡನ್ನು ಇಟ್ಟಿದ್ದರು ಈಗ ಅದನ್ನೂ ಕೂಡ ಕಿತ್ತಿ ಬಿಟ್ಟಿದ್ದಾರೆ, ಅದರ ಗುರುತೇ ಇಲ್ಲದಂತೆ ಆಗಿದೆ. 13ನೇ ನಂಬರ್ ಅಂತ ಕಲ್ಲು ಮಾತ್ರ ಉಳಿದಿದೆ. ಇದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ವಿಜಾಪುರ ಜಿಲ್ಲೆಯಲ್ಲಿ ನ್ಯಾಷನರ್ ಹೈವೇ ಆಗುತ್ತದೆ ಎಂದು ಹೇಳಿ ಭರವಸೆ ಇತ್ತು. ನರ್ಕಾರದವರ ಆ ಬಗ್ಗೆ ಯಾವ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು ಅದು ಆಗಿಲ್ಲ. ಮೊನ್ನೆ ಬಜೆಟ್ ತಯಾರು ಮಾಡಿದ ಮೇಲೆ, ಪಿ.ಡಬ್ಲ್ಯೂ.ಡಿ. ಮಿನಿಸ್ಟರನ್ನು ಕೇಳಿದ್ದಕ್ಕೆ ವಿಜಾಪುರ—ಬಾಗೇವಾಡಿ ರಸ್ತೆ ತಯಾರಾಗಿ ಎರಡು ವರ್ಷವಾಯಿತು. ಆದರೆ ಈಗ್ಗೆ ಕಾರು ಕೂಡ ನಡೆದರೆ ಹಾವು ನಡೆದಹಾಗಾಗುತ್ತದೆ. ಈ ವಿಷಯ ಎರಡು-ಮೂರು ವರ್ಷಗಳಿಂದ ಹೇಳಿದರೂ ಕೂಡ ಯಾವ ಕೆಲಸನೂ ಆಗಿಲ್ಲ. ಆ ರಸ್ತೆಯಲ್ಲಿ ಚಕಡಿ ಹೋಗುತ್ತದೆ, ರಸ್ತೆ ಎಲ್ಲಾ ಕೆಟ್ಟು ಹೋಗಿ ಮೋಟಾರು ಹೋಗಬೇಕಾದರೆ ಬಹಳ ತ್ರಾಸಾಗುತ್ತದೆ. ಇಂಜಿಯರಿಂಗ್ ಡಿಪಾರ್ಟಮೆಂಟಿನವರು ಇದಕ್ಕೆ ತಾರ ರೋಡು ಆಗುವಾಗ ವಿಶೇಷ ಗಮನಕೊಟ್ಟಿಲ್ಲ.

ಬಾಗೇವಾಡಿ—ಮುದ್ದೇಬಿಹಾಳ ರಸ್ತೆ via-ಬನರಕೋಡ ಬರಗಾಲದ ಕಾರ್ಯಕ್ರಮದಲ್ಲಿ ಮಾಡಿಸಿದ ರಸ್ತೆ. ಬಾಗೇವಾಡಿಯಿಂದ ಮುದ್ದೇಬಿಹಾಳಗೆ ಹೋಗಬೇಕಾದರೆ 27 ಮೈಲು ಆಗುತ್ತದೆ. via-Basarakod ಆದರೆ 20 ಮೈಲು ಆಗುತ್ತದೆ. ಎಂಟು ಹಳ್ಳಿಗಳಿಗೆ ಅನುಕೂಲ ವಾಗುತ್ತದೆ. ಅಲ್ಲಿ ಯಾವ ನಾರಾಗಳೂ ವಿಶೇಷವಿಲ್ಲ. ಶ್ರೀಮಾನ್ ಶಂಕರ ರಾವ್ ಅವರು

ಬಂದಿದ್ದಾಗ ಅವರ ಮೋಟಾರು ರಸ್ತೆ ನಡುವೆ ನಿಂತು ಹೋಯಿತು. ಒಂದು ದಿವಸದಲ್ಲಿ ಅದನ್ನು ತಯಾರು ಮಾಡಿಸುತ್ತೇನೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆಗ ವಿಜಾಪುರದ ಮಂದಿಗೆ ಬಹಳ ಸಂತೋಷವಾಯಿತು. ಇದುವರೆಗೂ ಏನೇನ್ನೂ ಮಾಡಿಲ್ಲ. ಈ 20 ಮೈಲಿಯನ್ನೂ ಪಿ. ಡಬ್ಲ್ಯೂ. ಡಿ. ಯವರೇ ತೆಗೆದುಕೊಂಡು ರಸ್ತೆ ಮಾಡಿಸಬೇಕು ಎಂದು ಹೇಳುತ್ತೇನೆ. ಇದನ್ನು ಮಾಡಿದರೆ ಬಿಜಾಪುರದಿಂದ ಹೋಗುವುದಕ್ಕಾಗಲಿ ಬಾಗೇವಾಡಿಯಿಂದ ಹೋಗುವುದಕ್ಕಾಗಲಿ 7 ಮೈಲಿಗಳ ದೂರ ಕಡಮೆಯಾಗುತ್ತದೆ. ಇದಕ್ಕಾಗಿ ಹೊಲ ತೆಗೆದುಕೊಂಡಿದ್ದಾರೆ, ರಸ್ತೆ ಮಾಡಿದ್ದಾರೆ, 7 ಮೈಲಿ ಕಡಮೆಯಾಗುವಂತೆ ಈ ರಸ್ತೆ ಮಾಡಿದರೆ ಅನುಕೂಲವಾಗುವುದು. ಈ ವರ್ಷವೇ ಬಾಗೇವಾಡಿ ಮುದ್ದೇಬಿಹಾಳ ರಸ್ತೆಯನ್ನು ಬಾಗಲಕೋಟೆ ಮೂಲಕ ಹಾದುಹೋಗುವಂತೆ ಮಾಡಿದರೆ ಬಾಗೇವಾಡಿ ಮತ್ತು ಮುದ್ದೇಬಿಹಾಳ ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ. ಇದನ್ನು ಅದಷ್ಟು ಜಾಗ್ರತೆ ಮಾಡಬೇಕು.

ವಿಜಾಪುರ ಸಂಬಂಧಪಟ್ಟ ಹಾಗಿರುವ ಇನ್ನೊಂದು ತೊಂದರೆ ಎಂದರೆ ವಿದ್ಯುಚ್ಛಕ್ತಿಗೆ ಸಂಬಂಧ ಪಟ್ಟಂತಿರುವುದನ್ನು ಹಿಂದಿನ ಭಾಷಣದಲ್ಲಿ ನಾನು ಹೇಳಿದೆ. ಅಲ್ಲಿ ವಿದ್ಯುಚ್ಛಕ್ತಿಯ ಪ್ರಕಾಶ ಸರಿಯಾಗಿ ಬೀಳುವುದಿಲ್ಲ, ಕಂದೀಲು ತೆಗೆದುಕೊಂಡು ನೋಡಬೇಕು. ಸರಕಾರಕ್ಕೆ ಹೇಳಿದ ಮೇಲೆ ಒಂದು ದೊಡ್ಡ ಮೆಷೀನ್ ಬಂತು, ಶರಾವತಿಯ ವಿದ್ಯುತ್ ಬರುತ್ತದೆ, ನಂತರ ಸರಿಹೋಗುತ್ತದೆ ಎಂದು ಹೇಳಿ ಎರಡು ವರ್ಷವಾಯ್ತು, 1964 ರಲ್ಲೂ ಬರಲಿಲ್ಲ, 1965 ರಲ್ಲಿ ಬರಬಹುದು ಎಂದು ಹೇಳಿದರು. ಈಗ ದೊಡ್ಡ ಎಂಜಿನ್ ಇದೆ, ಎರ್ಥಾ ಕಡೆಯೂ ಸರಬರಾಯಿ ಮಾಡಿಲ್ಲ, ತಂತಿ ಹಾಕಿಲ್ಲ. ಬಾಗೇವಾಡಿಯಲ್ಲಿ ಬಾವಿಗಳು ಬಹಳ ಇವೆ, ಆದರೆ ಎಂಜಿನ್ ಸೆಟ್ ತೆಗೆದುಕೊಳ್ಳಬೇಕೆಂದರೆ ವಿದ್ಯುಚ್ಛಕ್ತಿ ಬರುವವರೆಗೆ ನಿಲ್ಲಬೇಕು. ಪಂಪುಸೆಟ್ಟು ಮತ್ತು ಎಲೆಕ್ಟ್ರಿಕ್ ಮೋಟಾರು—ಈ ಎರಡನ್ನೂ ತೆಗೆದುಕೊಳ್ಳಲು ಹಣವೆಲ್ಲಿಂದ ಬರಬೇಕು ? ಇದರಿಂದ ಎಂಜಿನ್ ತೆಗೆದುಕೊಳ್ಳುವುದಕ್ಕೂ ಸಾಧ್ಯವಿಲ್ಲ, ನೀರೂ ಸಿಕ್ಕುವುದಿಲ್ಲ. ಆದುದರಿಂದ ತಂತಿವೆಚ್ಚ ಹೆಚ್ಚು ಮಾಡಿ ಸಿಂದಿಗಿ, ಇಂಡಿ ಮತ್ತು ವಿಜಾಪುರ—ಈ ಮೂರು ಕಡೆಗಳಿಗೆ ಬಾಗೇವಾಡಿಯಿಂದ ಲೈನು ಬರುವಂತೆ ಮಾಡಲು ಹೆಚ್ಚು ಗಮನ ಕೊಡಬೇಕು.

ಆರೋಗ್ಯದ ದೆಶೆಯಿಂದ ವಿಜಾಪುರದ ಸಿಟಿ ನೋಡಿದರೆ ಡ್ರೈನೇಜಿಲ್ಲ, ನೀರಿನ ಸೌಕರ್ಯವಿಲ್ಲ. ಆದುದರಿಂದ ಇದನ್ನು ಆಲಕ್ಷ ಮಾಡಬಾರದು, ಡ್ರೈನೇಜ್ ಸ್ಕೀಮನ್ನು ತೆಗೆದುಕೊಂಡು ಆರೋಗ್ಯಕ್ಕೆ ಅನುಕೂಲ ಮಾಡಿಕೊಡಬೇಕು.

ಸೇತುವೆಗಳ ವಿಚಾರ ಹೇಳುತ್ತೇನೆ. ಬಾಗೇವಾಡಿಯಲ್ಲಿ ಸಣ್ಣ ಸಣ್ಣ ಸೇತುವೆಗಳು ಬೇಕು. ಬಾಗೇವಾಡಿ—ಕೊರ್ಲಾರದ ದಾರಿಯಲ್ಲಿ ಎರಡು ಸೇತುವೆಗಳನ್ನು ಮಾಡಿದರೆ ಒಳ್ಳೆಯದು. ಕೊರ್ಲಾರದ ಸಂಬಂಧ ಬಾಗೇವಾಡಿಗೆ ಹೆಚ್ಚಾಗಿದೆ, ಅಲ್ಲಿ 40 ಸಾವಿರ ರೂಪಾಯಿಗಳಲ್ಲಿ ಎರಡು ಸೇತುವೆಗಳನ್ನು ಮಾಡಬಹುದು. ಮುತ್ತಗಿ ಮತ್ತು ಪಳನಂಗಿಯ ಹತ್ತಿರದ ಸೇತುವೆ ಈ ಎರಡು ಸೇತುವೆಗಳನ್ನು ಮಾಡಿದರೆ ಮತ್ತು ಕೋರ್ಲಾರಕ್ಕೆ ಬಾಗೇವಾಡಿಗೆ ಹೋಗಿಬರುವುದಕ್ಕೆ ಅನುಕೂಲವಾಗುತ್ತದೆ. ಆ ದೆಶೆಯಿಂದ ಈ ಎರಡು ಸೇತುವೆಗಳನ್ನೂ ತೆಗೆದುಕೊಳ್ಳಬೇಕೆಂದು ಹೇಳಿ ನಾಲ್ಕು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

† ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಪೂಜ್ಯ ಸಭಾಪತಿಯವರೆ, ಮಾನ್ಯ ರೋಕೋಪಯೋಗಿ ಸಚಿವರು ನಮ್ಮ ಮುಂದೆ ಇಟ್ಟಿರುವ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಮೂಲಕ ಸರಕಾರದ ಗಮನಕ್ಕೆ ತರಲು ಇಚ್ಛೆ ಪಡುತ್ತೇನೆ.

ಸ್ವಾಮಿ, ಮಾಗಡಿ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಸೌಕರ್ಯಕ್ಕಾಗಿ ಸರ್ವೆ ನಡೆದು ಏಳು ಲಕ್ಷ ರೂಪಾಯಿಗಳ ಅಂದಾಜಿನ ಕೆಲಸ ಮಂಜೂರಾಗಿ ನದರಿ ಕೆಲಸವು ಹಾಗೆಯೇ ನಿಂತಿದೆ. ಮಾಗಡಿ ತಾಲ್ಲೂಕಿನಿಂದ ಕುಣಿಗಲು ತಾಲ್ಲೂಕು ಹುಲಿಯೂರು ದುರ್ಗದ ಹೋಬಳಿ ಅಂಕನಹಳ್ಳಿ ಮಠಕ್ಕೆ ವಿದ್ಯುಚ್ಛಕ್ತಿ ಲೈನು ಮಂಜೂರಾಗಿ ಕೆಲಸ ಪ್ರಾರಂಭಮಾಡಿ ಹತ್ತು ಮೈಲಿ ಮಾಡಬೇಕಾಗಿದ್ದ ಕಾರ್ಯದಲ್ಲಿ ಐದು ಮೈಲಿಗಳವರೆಗೆ ಮಾತ್ರ ಕಂಬಗಳನ್ನು ನಿಲ್ಲಿಸಿದ್ದಾರೆ. ಉಳಿದ ಭಾಗದ ಕೆಲಸವನ್ನು ಮಾಡಿಕೊಡಿ ಎಂದರೆ ನಮ್ಮಲ್ಲಿ ಮೆಟೀರಿಯಲ್ಸ್ ಇಲ್ಲ ಎಂದು ಹೇಳುತ್ತಾರೆ. ಇರಾಖೆಯವರು ಯಾವುದಾದರೂ ಒಂದು ಕಾರ್ಯವನ್ನು ಮಾಡಬೇಕಾದರೆ ಸರ್ವೆಮಾಡಿಸಿ ಯಾವ ಯಾವ ಸಾಮಾನುಗಳು ಎಷ್ಟೆಷ್ಟು ಬೇಕು ಎಂದು ಅಂದಾಜುಮಾಡಿ ಆ ಕೆಲಸವನ್ನು ಪ್ರಾರಂಭ ಮಾಡಬೇಕಾದರೆ ತಮ್ಮಲ್ಲಿ ಎರ್ಥಾ ಸಾಮಾನುಗಳೂ ಇಪೆಯೆ, ಹಿಡಿದ ಕೆಲಸಕ್ಕೆ ಪೂರ್ಣಮಾಡಲು ಅನುಕೂಲಗಳವೆಯೇ ಎಂದು ಯೋಚನೆ ಮಾಡಿ ಕೆಲಸಮಾಡಬೇಕು. ಅರ್ಧ ಕೆಲಸಮಾಡಿ ಉಳಿದ ಅರ್ಧಕ್ಕೆ ಸಾಮಾನಿಲ್ಲವೆಂದರೆ ಏನು ಕೆಲಸ ಸಾಧಿಸಿದಂತಾಯಿತು ? ಆ ಸಾಮಾನುಗಳೆಲ್ಲವೂ ನಿರರ್ಥಕವಾದಂತಾಗುತ್ತದೆ. ನಾನಾದರೂ ಭಾವಿಸಿದ್ದೆ ಮಾಗಡಿ ಟೌನ್ ಪಕ್ಕದಿಂದ ಅಂಕನಹಳ್ಳಿ ಮಠಕ್ಕೆ ಲೈನು ಹೋಗುವುದರಿಂದ ನಮ್ಮ ತಾಲ್ಲೂಕಿನಲ್ಲಿ ಅಕ್ಕಪಕ್ಕದ ಬಾವಿಗಳಿಗೆ ಸಬ್‌ಲೈನು ತೆಗೆದುಕೊಳ್ಳಲು ಅವಕಾಶವಾಗುವುದೆಂದು. ಆದರೆ

(ಶ್ರೀ ಸಿ. ಆರ್. ರಂಗೇಗೌಡ)

ನಮ್ಮ ಆಸೆ ನಿರಾಶೆಯಾಯಿತು. ಈಗರಾದರೂ ನಾನು ಒಂದು ಸಲಹೆಯನ್ನು ಮಾಡಬಯಸುತ್ತೇನೆ. ಮಾಗಡಿ ತಾಲ್ಲೂಕಿನಲ್ಲಿ ಮಂಚನಬೆಲೆ ಪ್ರಾಜೆಕ್ಟ್ ನಡೆಯುವ ಕಡೆ ಮುಳುಗಡೆ ಪ್ರದೇಶದಲ್ಲಿ ಬಹಳ ಹಿಂದೆಯೇ ಎರೆಕ್ಟ್ರಿಕ್ ಲೈನ್ ಮಂಜೂರಾಗಿ ಕಂಬ ಹಾಕಿತ್ತು. ಸದರಿ ಕಂಬವನ್ನು ಈಗ ಪ್ರಾಜೆಕ್ಟ್ ಕಟ್ಟುವುದರಿಂದ ಮುಳುಗಿ ಹೋಗುತ್ತದೆಂಬ ಭಾವನೆಯಿಂದ ವಿತ್‌ಡ್ರಾ ಮಾಡುತ್ತಿದ್ದಾರೆ. ಸದರಿ ಕಂಬಗಳನ್ನೇ ಹಾಲಿ ಅಂಕನ ಹಳ್ಳಿ ಮಠಕ್ಕೆ ಅರ್ಧ ಸಂಚಿರುವ ಕೆಲಸಕ್ಕೆ ಉಪಯೋಗಿಸಿಕೊಂಡು ಅತಿ ಜರೂರಾಗಿ ಕೆಲಸವನ್ನು ಮುಗಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ. ಸ್ವಾಮಿ, ಬೆಂಗಳೂರು ದಕ್ಷಿಣ ತಾಲ್ಲೂಕು ರಾಮೋಹಳ್ಳಿಯಿಂದ ಮಾಗಡಿ ತಾಲ್ಲೂಕು ಚುಂಚನಕುಪ್ಪೆ, ಕೇತೊಹಳ್ಳಿ, ಗಣಪತಿಹಳ್ಳಿಗೆ ಎರೆಕ್ಟ್ರಿಕ್ ಲೈನ್ ಮಂಜೂರಾಗಿ ಕಂಬ ಹಾಕಿದ್ದಾರೆ; ಒಂದು ಲೈನ್ ತಂತಿ ಹಾಕಿದ್ದಾರೆ, ಎರಡು ಟ್ರಾನ್ಸ್‌ಫಾರ್ಮರುಗಳು ಬೇಕೆಂದು ಹಾಗೆಯೇ ಕೆಲಸ ನಿಲ್ಲಿಸಲಾಗಿದೆ. ಈ ಬಗ್ಗೆ ಮಾನ್ಯ ರೋಕೋಪಯೋಗಿ ಸಚಿವರಿಗೆ ಕಾಗದ ಬರೆದಿದ್ದೆ. ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳಿಗೆ ಬರೆದಿದ್ದೇವೆಂದು ಕಾಗದ ಬರೆದಿದ್ದಾರೆ. ಸದರಿ ಕೆಲಸವನ್ನು ಅತಿ ಜರೂರಾಗಿ ಮಾಡಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಮಾಗಡಿ ತಾಲ್ಲೂಕಿನಲ್ಲಿ ಸುಮಾರು 40-50 ಜನರು ಪಂಪ್‌ಸೆಟ್, ಪಂಪ್‌ಹೌಸ್ ಮತ್ತು ಬಾವಿ ಮುಂತಾದ್ದೆಲ್ಲವನ್ನೂ ಸಿದ್ಧಮಾಡಿಕೊಂಡು ಈಗ 4-5 ವರ್ಷಗಳಿಂದಲೂ ಕಾಯುತ್ತಿದ್ದಾರೆ. ಅವರೆಲ್ಲರಿಗೂ ಅತಿ ಜರೂರಾಗಿ ವಿದ್ಯುಚ್ಛಕ್ತಿ ದೊರೆಯುವಂತೆ ಮಾಡಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

ಸ್ವಾಮಿ, ಮಾಗಡಿ ತಾಲ್ಲೂಕಿನಲ್ಲಿ ಅನೇಕ ನದಿಗಳು ಹರಿಯುತ್ತಿದ್ದು, ದೊಡ್ಡ ದೊಡ್ಡ ಹಳ್ಳಿಗಳಿದ್ದು ಒಂದು ಕಡೆಯಿಂದ ಮತ್ತೊಂದು ಕಡೆಗೆ ತಿರುಗಾಡಲು ಸೇತುವೆಗಳಿಲ್ಲ. ಈ ಬಗ್ಗೆ ಅಂದರೆ ಮಾಗಡಿ ತಾಲ್ಲೂಕಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಯಾವನ್ನೂ ಮಾಡಿಲ್ಲವೆಂದಮೇರೆ ಮುಖ್ಯಮಂತ್ರಿಗಳು ಆಗಬೇಕಾದ ಕೆಲಸ ಪಟ್ಟಿಯನ್ನು ಕೊಡಿ ಎಂದು ಹೇಳಿದರು. ಅದರಂತೆ ಆಗಬೇಕಾದ ಕೆಲಸಗಳ ಪಟ್ಟಿಯನ್ನು ಕೊಟ್ಟೆನು. ಇದುವರೆವಿಗೂ ಯಾವ ಕೆಲಸವನ್ನೂ ತೆಗೆದುಕೊಂಡಿರುವುದಿಲ್ಲ. ಈಗ ರಾದರೂ ರೋಕೋಪಯೋಗಿ ಮಂತ್ರಿಗಳು ಸದರಿ ಪಟ್ಟಿಯನ್ನು ತರಿಸಿಕೊಂಡು ಕೆಲಸಗಳನ್ನು ಮಾಡಿಸಿಕೊಡಬೇಕೆಂದು ಬೇಡುತ್ತೇನೆ.

ಸ್ವಾಮಿ, ಮಾಗಡಿ ತಾಲ್ಲೂಕಿನಲ್ಲಿ ತಿಪ್ಪಸಂದ್ರ ಹೋಬಳಿಯಲ್ಲಿ ಕುದುರೆ ಜಬ್ಬಲು ಎಂಬಲ್ಲಿ ಒಂದು ಸೇತುವೆಯನ್ನು ಮಾಡಿಕೊಡಬೇಕೆಂದು ಮಾನ್ಯ ರೋಕೋಪಯೋಗಿ ಮಂತ್ರಿಗಳಿಗೆ ಕಾಗದ ಬರೆದಿದ್ದೆ. ಅದನ್ನು ಸ್ಥಳೀಯ ಅಧಿಕಾರಿಗಳಿಗೆ ಕಳುಹಿಸಿದ್ದರು. ನಾನು ಅವರನ್ನು ಕರೆದುಕೊಂಡು ಸ್ಥಳಕ್ಕೆ ಹೋಗಿ ಅಳತೆ ಮಾಡಿಸಿಕೊಂಡು ಬಂದೆ. ಸದರಿ ರಿಕಾರ್ಡು ಇದುವರೆವಿಗೂ ಮೇಲಕ್ಕೆ ಬರಲಿಲ್ಲ. ಅದನ್ನು ತರಿಸಿ ಮಂಜೂರು ಮಾಡಿಕೊಡಬೇಕೆಂದು ಬೇಡುತ್ತೇನೆ. ಸ್ವಾಮಿ, ಇದೇ ರೀತಿ ಈ ತಾಲ್ಲೂಕಿನಲ್ಲಿ ಚಿಕ್ಕಬಾವಿ ಮತ್ತು ಸೀಗೇಕುಪ್ಪೆ ಮಧ್ಯೆ ಒಂದು ಸೇತುವೆ, ಬೆಳಗವಾಡಿ ಮತ್ತು ನುಬ್ಬರಾಯ ಬ್ಯಾಡರಹಳ್ಳಿ ಮಧ್ಯೆ ಒಂದು ಸೇತುವೆ, ಮಾಡಬಾಳ್ ಮತ್ತು ಮಾನಗರ್ ಮಧ್ಯೆ ಹಳ್ಳಕ್ಕೆ ಒಂದು ಸೇತುವೆಯನ್ನೂ ಸಹ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಸ್ವಾಮಿ, ಮಾಗಡಿ ತಾಲ್ಲೂಕು ಬೆಟ್ಟಗುಡ್ಡಗಳ ಪ್ರದೇಶ. ಹಳ್ಳಕೊಳ್ಳಗಳಿಂದ ಕೂಡಿದ ಪ್ರದೇಶ, ಸರಿಯಾದ ರಸ್ತೆಗಳಿಲ್ಲ, ವಾಹನ ಸಂಚಾರಕ್ಕೆ ಸೌಕರ್ಯವಿಲ್ಲ. ಫಲಿಜಾರು ಪ್ರದೇಶವಾದುದರಿಂದ ಮಾಡಿದ ಕೆಲಸವೆಲ್ಲವೂ ಮಳೆಗಾಲದಲ್ಲಿ ಕೊಚ್ಚಿಹೋಗುತ್ತದೆ. ಆದುದರಿಂದ ಹೆಚ್ಚಾಗಿ ಪಿ.ಡಬ್ಲ್ಯು.ಡಿ. ಗೆ ರಸ್ತೆಗಳನ್ನು ವಹಿಸಿಕೊಳ್ಳಬೇಕು. ಅಕ್ಕಪಕ್ಕದ ತಾಲ್ಲೂಕುಗಳೊಡನೆ ನಮಗೆ ರಸ್ತೆ ಸಂಪರ್ಕವಿಲ್ಲ. ರಾಮನಗರಂ ತಾಲ್ಲೂಕಿನಲ್ಲಿ ಅಂಕನಹಳ್ಳಿವರೆಗೆ ರಸ್ತೆ ತೆಗೆದುಕೊಂಡಿದ್ದಾರೆ. ಅದೇ ರಸ್ತೆಯನ್ನು ಗೇರಹಳ್ಳಿ, ಅಜ್ಜನಹಳ್ಳಿ, ನಾಗಮಂಗಲದ ಮೂಲಕ ಮಾಗಡಿಯವರೆಗೆ ಮಾಡಬೇಕು, ಅದನ್ನು ಪಿ.ಡಬ್ಲ್ಯೂ.ಡಿ. ವಹಿಸಿಕೊಳ್ಳಬೇಕು. ಅಂತೆಯೇ ಗೆಜ್ಜಗಾರ ಗುಪ್ಪೆಯಿಂದ ಬೆಳಗವಾಡಿ, ನುಬ್ಬರಾಯ, ಬ್ಯಾಡರಹಳ್ಳಿ, ಕಲ್ಲುದೇವನಹಳ್ಳಿ ಮೂಲಕ ಕಣಿಗಲು ತಾಲ್ಲೂಕು ಹೊಸಮೊಡ್ಡಿಗೆ ರಸ್ತೆ ಸೇರಿಸಬೇಕು. ಮತ್ತು ಮುಖ್ಯವಾಗಿ ಈ ಸಾಲಿನಲ್ಲಿ ಫಸ್ಟ್ ಪ್ರಿಯಾರಿಟಿಯಾಗಿ ಮಾಗಡಿ ತಾಲ್ಲೂಕು ಮಾಡಬಾಳ್ ಹೋಬಳಿ ಕೇಂದ್ರ ಗ್ರಾಮವಾದ ಮಾಡಬಾಳ್ ಗ್ರಾಮದ ರಸ್ತೆಯನ್ನು ಮಾಗಡಿ ಟೌನ್‌ವರೆಗೆ ಸೇರಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಮಾಗಡಿ ತಾಲ್ಲೂಕಿನಿಂದ ಬೆಂಗಳೂರಿನಂತಹ ಬೃಹತ್ ಪಟ್ಟಣಕ್ಕೆ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸುತ್ತಿದ್ದರೂ ಮಾಗಡಿ ತಾಲ್ಲೂಕಿನಲ್ಲಿ 137 ಗ್ರಾಮಗಳಲ್ಲಿ ಸವರ್ಣೀಯರಿಗೂ, 67 ಗ್ರಾಮಗಳಲ್ಲಿ ಹರಿಜನರಿಗೂ ಕುಡಿಯುವ ನೀರಿನ ಬಾವಿಗಳಿಲ್ಲ. ಇದುವರೆವಿಗೂ ಹಳ್ಳಕೊಳ್ಳಗಳಲ್ಲಿ ನೀರನ್ನು ತಂದು ಕುಡಿಯುತ್ತಿದ್ದರು. ಈ ಸಾರಿ ಮಳೆ ಇಲ್ಲದುದರಿಂದ ಹಳ್ಳದಲ್ಲಿಯೂ ನೀರು ಸಿಗದಂತಾಗಿದೆ. ಆದುದರಿಂದ ಮಾಗಡಿ ತಾಲ್ಲೂಕಿನ ನೀರಿನ ಬಾವಿಗಳಿಲ್ಲದ ಎಲ್ಲಾ ಗ್ರಾಮಗಳಿಗೂ

ನೀರಿನ ಬಾವಿ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಸ್ವಾಮಿ, ಸರಕಾರದವರು ಮಾಗಡಿ ಟೌನಿಗೆ ನೀರಿನ ಸೌಕರ್ಯ ಒದಗಿಸಿಕೊಟ್ಟರು. ನಾನು ಅದಕ್ಕೆ ಕೃತಜ್ಞನಾಗಿರುತ್ತೇನೆ. ಆದರೆ ನದರಿ ಬಾವಿಯಲ್ಲಿನ ನೀರು ಸಾಲದಆಗಿರುತ್ತೆ. ಈಗ ನದರಿ ಬಾವಿಯನ್ನು ಆಳ ಮಾಡಿಕೊಡಬೇಕು ಮತ್ತು ಅಕ್ಕಪಕ್ಕದಲ್ಲಿ ಇನ್ನೂ ಎರಡು ಮೂರು ಬಾವಿಗಳನ್ನು ಮಾಡಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಕೊನೆಯದಾಗಿ ಸ್ವಾಮಿ, ಇದುವರೆಗೂ ತಿಪ್ಪಗೊಂಡನಬಳ್ಳಿ ಕೆರೆ ಹಿಂದೆ ಲೀಕೇಜ್ ವಾಟರ್ ಹಳ್ಳದಲ್ಲಿ ಬರುತ್ತಿತ್ತು. ಹಾಗೆಯೇ ಕೋಡಿಯಿಂದ ನೀರು ನದಾ ಹೊರಗೆ ಬಂದು ಹಳ್ಳದಲ್ಲಿ ಹರಿಯುತ್ತಿತ್ತು. ಕೆಳಭಾಗದ ಗ್ರಾಮದ ರೈತರು, ಜಾನುವಾರುಗಳು ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಆದರೆ ಈಚೆಗೆ ಆ ಸೀಪೇಜ್ ಮತ್ತು ಕೋಡಿ ನೀರನ್ನು ಸಹ ಟನರ್ ಮೂಲಕ ತೆಗೆದುಕೊಂಡು ಬೆಂಗಳೂರು ನಗರಕ್ಕೆ ಕುಡಿಯುವ ನೀರು ಉಪಯೋಗಿಸುವುದಕ್ಕಾಗಿ ಪಂಪ್ ಮಾಡುತ್ತಿದ್ದಾರೆ. ಆದುದರಿಂದ ಕೆಳಭಾಗದ ಗ್ರಾಮಗಳಿಗೆ ನೀರೇ ಸಿಗದೆ ಅನಾನುಕೂಲವಾಗಿರುತ್ತೆ. ಆದುದರಿಂದ ವಾರಕ್ಕೆ ಎರಡು ಮೂರು ದಿನವಾದರೂ ನೀರು ಹಳ್ಳದಲ್ಲಿ ಹರಿದು ಬಂದು ಹಿಂಭಾಗದ ಗ್ರಾಮಗಳವರಿಗೆ ಅನುಕೂಲವಾಗುವ ರೀತಿಯಲ್ಲಿ ನೀರನ್ನು ಬಿಟ್ಟುಕೊಡಿಬೇಕೆಂದು ಅತಿ ವಿನಯದಿಂದ ಪ್ರಾರ್ಥಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ಪೂಜ್ಯ ಸಭಾಪತಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಮಾನ್ಯ ಅಧ್ಯಕ್ಷರೇ, ಈ ದಿವನ ಸಭೆಯಲ್ಲಿ ಮಂಡಿಸಿರತಕ್ಕಂಥ ಡಿಮ್ಯಾಂಡ್ ನಂಬರು 6, 30ಎ, 31, 32, 43, 47, 48, 50 ಇವುಗಳನ್ನು ಪೂರ್ಣ ಸ್ವಾಗತಿಸುತ್ತಾ ನನ್ನ ನಾಲ್ಕು ವಿಚಾರಗಳನ್ನು ಹೇಳಲು ಬಯಸುತ್ತೇನೆ. ಈವರೆಗೆ ಪಿ. ಡಬ್ಲ್ಯೂ. ಡಿ. ಖಾತೆಯವರು ನಮ್ಮ ಭಾಗದಲ್ಲಿ ಅದರಲ್ಲಿಯೂ ಮೈಸೂರು ರಾಜ್ಯದಲ್ಲಿ ಮಾಡಿದ ಕೆಲಸ ನೋಡಿದರೆ ನಾವು ಹೆಮ್ಮೆ ಪಡಬೇಕಾಗಿದೆ. 1956ಕ್ಕಿಂತ ಮುಂಚೆ ಮುಂಬಯಿ ಸರಕಾರದ ಆಡಳಿತದಲ್ಲಿ ಉತ್ತರ ಕರ್ನಾಟಕ ನಾಲ್ಕು ಜಿಲ್ಲೆಗಳಾದ ಬೆಳಗಾಂ, ಧಾರವಾಡ, ವಿಜಾಪುರ ಕಾರವಾರ ಜಿಲ್ಲೆಗಳು ಇದ್ದವು. ಗುಲಬರ್ಗಾ ಬೀದರ್ ರಾಯಚೂರು ಈ ಮೂರು ಜಿಲ್ಲೆಗಳು ನೈಜಾಂ ಆಡಳಿತದಲ್ಲಿದ್ದವು. ಮಂಗಳೂರು ಜಿಲ್ಲೆ ಮದ್ರಾಸ್ ರಾಜ್ಯಕ್ಕೆ ಸೇರಿತ್ತು. ಕೊಡಗು ತನ್ನದೇ ಆದ ಒಂದು ಪ್ರತ್ಯೇಕ ಪ್ರದೇಶವಾಗಿತ್ತು. ಹಳೇ ಮೈಸೂರು ಮಹಾರಾಜರನ್ನು ಪಡೆದಿತ್ತು, ಮತ್ತು ಒಂದು ಮಂತ್ರಿ ಮಂಡಲ ಪಡೆದು ತನಗೆ ಯಾವ ರೀತಿ ಬೇಕೋ ಆ ರೀತಿಯೋಗ್ಯ ಸೌಕರ್ಯಗಳನ್ನು ಒದಗಿಸಲಾಗಿತ್ತು. ಆದುದರಿಂದ ಹಳೇ ಮೈಸೂರಿಗೆ ಎಲ್ಲ ಸೌಕರ್ಯಗಳು ಸಿಕ್ಕಿರುತ್ತವೆ. ಎಲ್ಲ ನೀರಾವರಿ ಸೌಕರ್ಯಗಳನ್ನು ಒಳ್ಳೇ ರಸ್ತೆ ರಚನೆ ಮಾಡುವುದರಲ್ಲಿ ಕೈಗಾರಿಕೆ ಹಾಗು ಉಳಿದ ಎಲ್ಲ ಕಾರ್ಯಕ್ರಮದಲ್ಲಿ ಹಳೇ ಮೈಸೂರು ರಾಜ್ಯ ಬಹಳ ಮುಂದುವರಿದಿದೆ ಎಂಬ ಭಾವನೆ ಎಲ್ಲರಲ್ಲಿಯೂ ಇತ್ತು. ಎಲ್ಲ ಕನ್ನಡಿಗರೂ ಹೆಮ್ಮೆ ಪಡತಕ್ಕ ವಿಷಯ. ಆದರೆ ಎಲ್ಲ ಕನ್ನಡಿಗರಿಗೆ ಒಂದೇ ರಾಜ್ಯ ಇರಲಿಲ್ಲ. ಕನ್ನಡಿಗರು ಹರಿದು ಹಂಚಿ ಹೋಗಿದ್ದರು. ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಲೆಗಳ ಬಗ್ಗೆ ಹೇಳುವುದಾದರೆ ಮುಂಬಯಿ ರಾಜ್ಯದಲ್ಲಿ ಇರುವಾಗ್ಗೆ ಅಲ್ಲಿಯ ಕನ್ನಡಿಗರು ಅನ್ಪ್ರಜರ ಹಾಗೆ ಪರಿಸ್ಥಿತಿಯಲ್ಲಿ ಇದ್ದರು. ಹೈದರಾಬಾದದಲ್ಲಿ ಅಂತೂ ನಿಜಾಮರ ಆಳ್ವಿಕೆಯಲ್ಲಿ ಕೇಳುವವರೇ ಇರಲಿಲ್ಲ. ಮಂಗಳೂರು ಜಿಲ್ಲೆಯವರು ಮಾತ್ರ ತಮ್ಮ ಜಾಣತನದಿಂದ ಮದ್ರಾಸ್ ರಾಜ್ಯದಲ್ಲಿ ಅಷ್ಟು ನಿರ್ಲಕ್ಷಿಸಲ್ಪಟ್ಟಿದ್ದಿಲ್ಲ, ಕೊಡಗಿನಲ್ಲಿ ಮಾತ್ರ ತನ್ನದೇ ಆದ ಒಂದು ಆಡಳಿತ ಇದ್ದುದರಿಂದ ಅಷ್ಟು ತೊಂದರೆಯಾಗಿರಲಿಲ್ಲ. ಕನ್ನಡಿಗರ ಬಹಳ ದಿನದ ಆಶೆಯಾದ ಏಕೀಕೃತ ಕರ್ನಾಟಕ ರಾಜ್ಯ ಆಗಬೇಕು ಎಂಬುದು ಕರ್ನಾಟಕ ರಾಜ್ಯ ಸ್ಥಾಪನೆಯಿಂದ ಅದು ಸಾಧನೆ ಮಾಡಲಾಯಿತು. ಇದಕ್ಕಾಗಿ ಎಲ್ಲ ಕನ್ನಡಿಗರೂ ಹೆಮ್ಮೆ ಪಡಬೇಕು. ಮಾನ್ಯ ನಿಜಲಿಂಗಪ್ಪನವರು ಬಹು ಕಷ್ಟಪಟ್ಟು ಕನ್ನಡಿಗರ ಕನಸು ನನಸಾಗುವಂತೆ ಮಾಡಿದರು. ಕನ್ನಡ ರಾಜ್ಯ ಸ್ಥಾಪನೆ ಮಾಡಿದರು. ನಾವು ಇಲ್ಲಿಗೆ ಬಂದುದು ಆದಮೇಲೆ ಇವರು ಕೊಡಗಿನವರು, ಇವರು ಹಳೇ ಮೈಸೂರಿನವರು, ಇವರು ಇಂಡೆಗ್ರೇಡೆಡ್ ಏರಿಯಾದಿಂದ ಬಂದವರು ಎಂಬ ಒಂದು ವಾದ ಉಂಟಾಯಿತು. ಈ ವಿಷಯ ಇಂದು ಮಾತನಾಡುವುದಕ್ಕೆ ಶಾಂತ ವಾತಾವರಣ ಇರುವುದರಿಂದ ಮಾನ್ಯ ಸ್ಪೀಕರ್ ಅವರು ನನಗೆ ಮಾತನಾಡಲು ಅವಕಾಶಕೊಟ್ಟು ಉಪಕಾರ ಮಾಡಿದ್ದಾರೆ. ಅವರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಾನ್ಯ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿ ಈ ಹೊಸ ರಾಜ್ಯದ ಮಂತ್ರಿಮಂಡಲ ರಚನೆ ಮಾಡಿ ದಕ್ಷರಾದ ಮಂತ್ರಿಗಳನ್ನು ಪಡೆದರು. ಇಂದು ಸಭೆಯಲ್ಲಿ ಬೇಡಿಕೆಗಳನ್ನು ಮಂಡಿಸಿರತಕ್ಕ ಶ್ರೀಮಾನ್ ವೀರೇಂದ್ರ ಪಾಟೀಲರವರು ಬಹಳ ದಕ್ಷರಾದ ಮಂತ್ರಿಗಳಾಗಿದ್ದಾರೆಂದು ನಾನು ಭಾವಿಸಿದ್ದೇನೆ. ಎಲ್ಲ ಸದಸ್ಯರೂ ಹೆಮ್ಮೆ ಪಡುವಂತ ದಕ್ಷ ಮಂತ್ರಿಗಳಾಗಿದ್ದಾರೆಂದು ನಾನು ಹೇಳುತ್ತೇನೆ. ನಮ್ಮ ಪ್ರದೇಶಕ್ಕೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸಿ ಕೊಡಬೇಕು ಮತ್ತು ನಮ್ಮ ಕಡೆಗೆ ಅಲಕ್ಷ್ಯ ಮಾಡಬಾರದು

(ಶ್ರೀ ಎಸ್. ಎ. ಅಗ್ನಿಹೋತ್ರಿ)

ಎಂದು ಅವರಿಗೆ ಪ್ರಾರ್ಥನೆ ಮಾಡುತ್ತೇನೆ. ಇನ್ನು ನರ್ ವಿಶ್ವೇಶ್ವರಯ್ಯ ಅವರ ಕಾಲದಲ್ಲಿ ಮೈಸೂರು ದೇಶದಲ್ಲಿ ದಕ್ಷತೆ ಹೆಚ್ಚಾಗಿತ್ತು. ಇಲ್ಲಿಯ ಎಂಜಿನಿಯರುಗಳು ದೇಶದಲ್ಲೆಲ್ಲಾ ಪ್ರಸಿದ್ಧರಾಗಿದ್ದರು. ಆಗ್ಗೆ ಒಬ್ಬ ಚೀಫ್ ಇಂಜಿನಿಯರು ಇದ್ದರು ಅವರು ತಜ್ಞರಾಗಿದ್ದು ಪ್ರತಿಯೊಂದನ್ನೂ ದಕ್ಷತೆಯಿಂದ ಕೆಲಸ ಮಾಡುತ್ತಿದ್ದರು ಈಗ ಒಂಭತ್ತು ಜನ ಎಂಜಿನಿಯರುಗಳು ಏತಕ್ಕೆ ಬೇಕು ಎಂದು ಕೆಲವು ವಿರೋಧಿ ಪಕ್ಷದ ನದನ್ಯರು ಹೇಳುತ್ತಾರೆ. ನಾನು ಹೇಳುವುದು ಏನೆಂದರೆ, ಆಗ್ಗೆ ಮೈಸೂರು ದೇಶ ಬಹಳ ಚಿಕ್ಕದು ಆಗಿತ್ತು. ಉಳಿದ ಕನ್ನಡ ಪ್ರದೇಶ ಹರಿದು ಹಂಚಿ ಹೋಗಿ ಅರ್ಧೊಂದು ಇರ್ಧೊಂದು ಭಾಗ ಇತ್ತು. ಈಗ ಎಲ್ಲ ಪ್ರದೇಶ ಒಟ್ಟು ಗೂಡಿ ಒಂದು ಸಮಗ್ರ ಕರ್ನಾಟಕ ರಾಜ್ಯ 2 ಕೋಟಿ 20 ಲಕ್ಷ ಜನ ಸಂಖ್ಯೆ ಇರತಕ್ಕ ರಾಜ್ಯ ರಚನೆಯಾಗಿದೆ. ದೊಡ್ಡ ರಾಜ್ಯವಾದಮೇಲೆ ಉತ್ತಮ ರೀತಿಯಿಂದ ಎರ್ಲಾ ಕ್ಷೇತ್ರಗಳಿಗೂ ಸೇವೆ ಸಲ್ಲಸಬೇಕಾಗಿರುವುದರಿಂದ ದೊಡ್ಡ ಪ್ರಮಾಣದಲ್ಲಿ ದಕ್ಷ ಎಂಜಿನಿಯರುಗಳು ತಜ್ಞ ಮಂತ್ರಿಮಂಡಲ ಮತ್ತು ದಕ್ಷತೆಯಿಂದ ಒಡಗೂಡಿದ ಅಧಿಕಾರಿಗಳು ಇರುವುದರಿಂದ ರಾಜ್ಯ ಉನ್ನತಿಯನ್ನು ಪಡೆಯುತ್ತದೆ ಎಂದು ನಾನು ಭಾವಿಸುತ್ತೇನೆ. ಈಗ ಪಿ. ಡಬ್ಲ್ಯೂ. ಡಿ. ವಿಚಾರ ಹೇಳಬೇಕಾದರೆ ಈಗ ಅದು ಎಷ್ಟೋ ಕೆಲಸ ಮಾಡಿದೆ. ಅದಕ್ಕಾಗಿ ನಾವು ಹೆಮ್ಮೆ ಪಡುತ್ತೇವೆ. ಇನ್ನೂ ಆಗಬೇಕಾದ ಅನೇಕ ಕೆಲಸಗಳು ಉಳಿದಿವೆ. ಅವುಗಳನ್ನು ತೀವ್ರ ಗತಿಯಿಂದ ದಕ್ಷತೆಯಿಂದ ಪೂರೈಸಬೇಕೆಂದು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಪ್ರಾರ್ಥಿಸುತ್ತೇನೆ. ಮೈಸೂರು ರಾಜ್ಯದಲ್ಲಿ ಬೆಂಗಳೂರು ಪೂನಾ ನ್ಯಾಷನರ್ ಹೈ ವೇ ನಂ. 4 ಇದನ್ನು ಉತ್ತಮ ರೀತಿಯಲ್ಲಿ ರಕ್ಷಣೆ ಮಾಡುತ್ತಾ ಬಂದಿದ್ದೀರಿ. ಆದರೆ ಈ ಹೈ ವೇ ನಲ್ಲಿ ಒಂದು ಕೊಂದರೆ ಇರುವುದು ಏನು ಅಂದರೆ ಅನೇಕ ಕಡೆ ರೈಲ್ವೆ ಲೈನು ಕ್ರಾಸ್ ಮಾಡಬೇಕಾಗುವುದರಿಂದ ಅನೇಕ ರೈಲ್ವೆ ಗೇಟುಗಳು ಇವೆ. ಈ ರೈಲ್ವೆ ಗೇಟುಗಳ ಮೂಲಕ ಸಾರಿಗೆಗೆ ಅತಂಕ ಉಂಟಾಗುತ್ತದೆ. ಆದರಲ್ಲಿಯೂ ಮುಖ್ಯವಾಗಿ ಧಾರವಾಡ ಹುಬ್ಬಳ್ಳಿ ಮತ್ತು ಬೆಳಗಾಂವ ಹತ್ತಿರ ರೈಲ್ವೆ ಗೇಟ್ ಇರುವ ಕಡೆ ಅಂಡರ್ ಬ್ರಿಡ್ಜ್ ಆಗಲ ಓವರ್ ಬ್ರಿಡ್ಜ್ ಆಗಲ ಮಾಡಿನುವ ವ್ಯವಸ್ಥೆ ಮಾಡಿದರೆ ಸಾರಿಗೆಗೆ ಅನುಕೂಲವಾಗುತ್ತದೆ. ಈಗ ಮೋಟಾರು ವೆಹಿಕರ್ ಟ್ಯಾಕ್ಸ್ 150 ಇದ್ದುದು 450 ರೂಪಾಯಿ ಮಾಡಿರುವುದರಿಂದ ಅವರ ಅತಂಕ ದೂರು ಮಾಡಿ ಅವರು ಕೇಳುವ ಸೌಕರ್ಯ ಮಾನ್ಯ ಮಾಡಿ ಅಂಡರ್ ಬ್ರಿಡ್ಜ್ ಅಥವಾ ಓವರ್ ಬ್ರಿಡ್ಜ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಎರಡನೇಯದಾಗಿ ಬೆಂಗಳೂರು ಸೊರ್ಲಾಪುರ ರೋಡ್ ನ್ಯಾಷನರ್ ಹೈ ವೇ ಮಾಡಬೇಕು. ಈಗ ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡದೇ ಹೋದರೆ ಮುಂದೆ ಅದು ಆಗಲಿಕ್ಕಿಲ್ಲ. ಆದುದರಿಂದ ಬೆಂಗಳೂರು ಸೊರ್ಲಾಪುರ ರೋಡ್ ತೆಗೆದುಕೊಳ್ಳಬೇಕು ರೈಲ್ವೆ ಗೇಟ್ ಇರುವ ಕಡೆ ಅಂಡರ್ ಬ್ರಿಡ್ಜ್ ಅಥವಾ ಓವರ್ ಬ್ರಿಡ್ಜ್ ಇರುವ ಹಾಗೆ ಮಾಡಬೇಕು.

ಮೂರನೆಯದಾಗಿ ಧಾರವಾಡ ಮತ್ತು ಪಂಜಿಮ್ ರೋಡ್ ಉತ್ತಮ ಸ್ಥಿತಿಯಲ್ಲಿ ಇದೆ ಎಂದು ಹೇಳಿದ್ದೀರಿ. ಇದು ಮೆಟರ್ ರೋಡ್ ಇದೆ. ಈ ರೋಡ್ ಅನ್ವಲ್ಡ ಮಾಡಿದರೆ ಇದು ಪ್ರವಾಸಿಗಳಿಗೆ ಒಂದು ಉತ್ತಮ ರೋಡ್ ಆಗುತ್ತದೆ ಎಂದು ಹೇಳಲು ಇಚ್ಛಿಸುತ್ತೇನೆ.

ಇನ್ನು ಧಾರವಾಡ ಉಳವಿ ರೋಡ್ ಬಗ್ಗೆ ಹೇಳುವುದಾದರೆ ಧಾರವಾಡ ಜಿಲ್ಲೆಯಲ್ಲಿ ಎಸ್. ಟಿ. ಕಾರ್ಪೋರೇಷನ್ ಅವರಿಗೆ ಮೊದಲು ಎಲ್ಲಕ್ಕಿಂತ ಹೆಚ್ಚು ರಾಭ ಬಂದುದು ಈ ಧಾರವಾಡ ಉಳವಿ ರೋಡ್ ಟ್ರಾನ್ಸ್‌ಪೋರ್ಟಿನಿಂದ ಎಂಬುದನ್ನು ಹೇಳಬಯಸುತ್ತೇನೆ. ಹೋದ ವರ್ಷ ವಿಜಾಪುರ ಜಿಲ್ಲೆಯಲ್ಲಿ ಹೆಚ್ಚು ರಾಭ ಬಂದಿದೆ. ಅನಂಖ್ಯಾತ ಜನ ಉಳವಿಗೆ ಹೋಗುವುದರಿಂದ ಈ ರೋಡು ಉತ್ತಮ ಸ್ಥಿತಿಯಲ್ಲಿ ಇರಬೇಕಾದುದು ಅಗತ್ಯ. ಧಾರವಾಡ ನವದತ್ತಿ ರೋಡಿನಲ್ಲಿ ಕೂಡ ಟ್ರಾಫ್ಯಿಕ್ ಜಾಸ್ತಿ ಇದೆ. ಯಾಕೆಂದರೆ, ಎಲ್ಲಮ್ಮನ ಜಾತ್ರೆಗೆ ಜನ ಹೆಚ್ಚು ಸಂಖ್ಯೆಯಲ್ಲಿ ಹೋಗುತ್ತಾರೆ. ಈ ರೋಡುಗಳನ್ನು ಉತ್ತಮ ರೋಡುಗಳನ್ನಾಗಿ ನಿರ್ಮಿಸಿ ಜನರಿಗೆ ಹೆಚ್ಚು ಅನುಕೂಲ ಮಾಡಿ ಕೊಡಬೇಕು. ಸರಕಾರಕ್ಕೂ ಕೂಡ ಇದರಿಂದ ಹೆಚ್ಚು ಉತ್ಪತ್ತಿ ಸಿಕ್ಕುತ್ತದೆ ಎಂದು ಹೇಳಬಯಸುತ್ತೇನೆ.

ಇನ್ನು ಎರೆಕ್ಟಿಸಿಟಿ ಸಪ್ಲೈ ಮಾಡುವಾಗ್ಗೆ ಮತ್ತು ಇರಿಗೇಷನ್ ಫ್ಯಾಸಿಲಿಟೀಜ್ ಕೊಡುವಾಗ್ಗೆ ಮುಖ್ಯವಾಗಿ ತಾವು ಒಂದು ಮಾತನ್ನು ವಿಚಾರ ಮಾಡಬೇಕು. ಯಾವ ಪ್ರದೇಶದಲ್ಲಿ ವಿದ್ಯುತ್ ಶಕ್ತಿ ಪೂರೈಕೆ ಕಡಿಮೆಯಾಗಿದ್ದು ಈ ವಿಚಾರದಲ್ಲಿ ಅದು ಬ್ಯಾಕ್‌ವರ್ಡ್ ಆಗಿರುತ್ತದೆಯೋ ಅಂಥ ಪ್ರದೇಶಕ್ಕೆ ಮೊದಲು ಹೆಚ್ಚಿನ ಪ್ರಮಾಣದಲ್ಲಿ ಇರೆಕ್ಟಿಸಿಟಿ ಸಪ್ಲೈ ಮಾಡುವ ವ್ಯವಸ್ಥೆ ಮಾಡಬೇಕಾದುದು ಅಗತ್ಯ ಎಂದು ಹೇಳುತ್ತೇನೆ. ಇರೆಕ್ಟ್ರಿಕಲ್ ಬ್ಯಾಕವರ್ಡ್ ಏರಿಯಾ ಎಂದು ನಿಶ್ಚಿತ ಮಾಡಿ ಅಲ್ಲಿ ಮೊದಲು ಪೂರೈಕೆ ಮಾಡದೇ ಹೋದರೆ ಮತ್ತು ಬೇರೆ ಕಡೆ ಕೊಡುತ್ತಾ ಹೋದರೆ

ನಮ್ಮ ಪ್ರದೇಶದಲ್ಲಿ ನಮ್ಮ ಮೊಮ್ಮಕ್ಕಳ ಕಾಲದಲ್ಲಿ ಇರೆಕ್ಟ್ರಿಸಿಟಿ ಸಿಕ್ಕುತ್ತದೆ ಎಂದು ಕಾಣುತ್ತದೆ. ಹಳೇ ಮೈಸೂರಿನಲ್ಲಿ ಬೇಕಾದಷ್ಟು ಇರೆಕ್ಟ್ರಿಸಿಟಿ ಫ್ಯಾಸಿಲಿಟೀಜ ಇವೆ. ಶಿವಸಮುದ್ರದಿಂದ ವಿದ್ಯುತ್ ಶಕ್ತಿ ಪೂರೈಕೆಯಾಗುತ್ತಿದೆ. ಶರಾವತಿ ಯೋಜನೆಯಾದ ಕೂಡಲೆ ನಮ್ಮ ಪ್ರದೇಶಕ್ಕೆ ಇರೆಕ್ಟ್ರಿಸಿಟಿ ಸಪ್ಲೈಯಾಗುತ್ತದೆ. ಎಂದು ಜನರಿಗೆ ನಾವು ಸಮಾಧಾನಮಾಡುತ್ತಾ ಬಂದಿದ್ದೇವೆ. ಶರಾವತಿ ಯೋಜನೆಯಾಗಿ ಎರಡು ವರ್ಷವಾಯಿತು. ಇನ್ನೂವರೆಗೆ ನಮ್ಮ ಪ್ರದೇಶದಲ್ಲಿ ಇರೆಕ್ಟ್ರಿಸಿಟಿ ಬಂದಿಲ್ಲ. ಜನರಿಗೆ ಯಾವ ರೀತಿ ಸಮಾಧಾನ ಮಾಡಿದ್ದೇವೆ ಅಂದರೆ ಕಂಡಕ್ಟರ್ಸ್ ಇರ್ಲಾ ಪ್ರೆತ್ತಿಯರ್ ಇರ್ಲಾ, ಪಾಕಿಸ್ತಾನದ ದಾಳಿಯಿಂದ ತೊಂದರೆಯಾಯಿತು ಚೈನಾ ದಾಳಿಯಿಂದ ತೊಂದರೆಯಾಯಿತು ಎಂದು ಹೇಳತಕ್ಕ ಬಂಡವಾಳದಮೇಲೆ ಇದುವರೆಗೆ ಉಳಕೊಂಡು ಬಂದಿದ್ದೇವೆ. ಅದಕ್ಕಿಂತ ಹೆಚ್ಚಾಗಿ ಬೇರೆ ಬಂಡವಾಳ ನಮ್ಮ ಹತ್ತರ ಇಲ್ಲ. ಈಗ ತಾಷ್ಕೆಂಟ್ ಒಪ್ಪಂದ ಆಯಿತು. ಈಗ ಯಾವ ತೊಂದರೆ ಇಲ್ಲ. ಆದುದರಿಂದ ನಮ್ಮ ಪ್ರದೇಶಕ್ಕೆ ವಿದ್ಯುತ್ ಶಕ್ತಿ, ಪೂರೈಕೆ ಹೆಚ್ಚಿನ ಪ್ರಮಾಣದಲ್ಲಿ ಮಾಡಬೇಕು ಎಂದು ಹೇಳುತ್ತೇನೆ. ಇಂಟಗ್ರೇಟೆಡ್ ಏರಿಯಾಕ್ಕೆ ಮೊದಲು ಸಪ್ಲೈ ಮಾಡಬೇಕು. ಕೇಂದ್ರ ಸರಕಾರದ ಮೇಲೆ ಒತ್ತಾಯ ತಂದು ಇರೆಕ್ಟ್ರಿಸಿಟಿ ಫ್ಯಾಸಿಲಿಟೀಜ್ ನಮಗೆ ತೀವ್ರ ಗತಿಯಲ್ಲಿ ಮಾಡಿಕೊಡಬೇಕೆಂದು ಮಾನ್ಯ ಸಚಿವರಿಗೆ ಏನಂತಿ ಮಾಡಿಕೊಳ್ಳುತ್ತೇನೆ.

5-00 P.M.

ಇನ್ನು ಇರಿಗೇಷನ್ ಫೆಸಿಲಿಟೀಸ್ ವಿಚಾರ ತೆಗೆದುಕೊಂಡರೆ ನಮ್ಮಲ್ಲಿ ಅನೇಕ ಜನಗಳಿಗೆ ಇರಿಗೇಷನ್ ಅಂದರೆ ಏನು ಎಂಬುದೇ ಗೊತ್ತಿಲ್ಲ. ತಿಳಿಸಿ ಹೇಳಬೇಕಾಗಿದೆ. ಮೈನರ್ ಇರಿಗೇಷನ್ ಮತ್ತು ಮೇಜರ್ ಇರಿಗೇಷನ್ ಎಂದರೆ ಏನು ಎಂದು ವಿವರಿಸಿ ಹೇಳಿದರೆ ಕೇಳುತ್ತಿದ್ದರು. ಅನೇಕ ಕೊಳಗಳು ಹಳ್ಳಗಳು ನಮ್ಮ ಕಡೆ ಇದ್ದರೂ ಈ ಮೈನರ್ ಇರಿಗೇಷನ್ ಆಗಲೀ, ಮೇಜರ್ ಇರಿಗೇಷನ್ ಆಗಲೀ ಇಲ್ಲ. ಯಾವ ತರಹದ ಇರಿಗೇಷನ್ ಕೂಡ ಇದುವರೆಗೆ ನಮ್ಮ ಕಡೆ ಆಗಿಲ್ಲ. ಆದ್ದರಿಂದ ಇರಿಗೇಷನ್ನಲ್ಲಿ ಬ್ಯಾಕ್‌ವರ್ಡ್ ಏರಿಯಾ ಎಂದು ಮಾಡಬೇಕೆಂದು ಏನಂತಿ ಮಾಡಿಕೊಳ್ಳುತ್ತೇನೆ. ನಮ್ಮ ದುರ್ದೈವವೆಂದು ಕಾಣುತ್ತದೆ, ನಮ್ಮ ಕಡೆ ಹೊಳೆಗಳೇ ಇಲ್ಲ. ಅಕಸ್ಮಾತ್ ಏನಾದರೂ ಇದ್ದರೆ ಅದರಲ್ಲಿ ಸರಿಯಾಗಿ ನೀರೆ ಇರುವುದಿಲ್ಲ. ಮಳೆ ಬಂದರೆ ಬರುತ್ತದೆ, ಇಲ್ಲದಿದ್ದರೆ ಇಲ್ಲ. ಮೇಜರ್ ಇರಿಗೇಷನ್ ಎಂದು ಹೇಳಿಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಮೀಡಿಯಂ ಇರಿಗೇಷನ್ ಮತ್ತು ಮೈನರ್ ಇರಿಗೇಷನ್‌ಗಳನ್ನು ನಮ್ಮ ಕಡೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಬೆಳಗಾಂನಲ್ಲಿರುವ ಘಟಪ್ರಭಾ ಎಡದಂಡೆ ಮತ್ತು ಬಲದಂಡೆ ಕೆಲಸವಾಗದೇ ಹಾಗೇ ಉಳಿದಿವೆ ಇದುವರೆಗೂ ಬರೀ ದಂತೆಗಳನ್ನೇ ನೋಡುತ್ತಿದ್ದೇವೆ. ನೀರು ಮಾತ್ರ ಅದರಲ್ಲಿ ಇಲ್ಲ. ಮಲಪ್ರಭಾ ಯೋಜನೆ ತೆಗೆದುಕೊಳ್ಳುತ್ತಾರೆಂದು ಕೇಳಿ ಬಹಳ ಸಂತೋಷವಾಯಿತು, ಈಗಿರುವ ಪ್ರಧಾನ ಮಂತ್ರಿಗಳು ಬಂದು ಅದರ ಅಸ್ತಿಭಾರವನ್ನು ಹಾಕಿದರು. ಅಲ್ಲಿರುವಂಥ ನೌಕರರಿಗೆ ಮನೆ ಕಟ್ಟಿಸಿ ಕೊಟ್ಟಿದ್ದೇವೆ. ನೀರಿನ ವ್ಯವಸ್ಥೆಯನ್ನು ಇತರ ಎರ್ಲಾ ವ್ಯವಸ್ಥೆಗಳನ್ನು ಮಾಡಿಕೊಟ್ಟಿದ್ದೇವೆ. ಆದರೆ ಕೆಲಸ ಎಷ್ಟು ತ್ವರಿತವಾಗಿ ನಡೆಯಬೇಕಾಗಿತ್ತೋ ಅಷ್ಟು ತ್ವರಿತವಾಗಿ ಆಗುತ್ತಿಲ್ಲ. ಆಲಮಟ್ಟಿ ಯೋಜನೆ ಮಾಡಿದ್ದೇವೆ. ಅದು ಸಹ ಸರಿಯಾದ ರೀತಿ ಮುಂದುವರೆಯುತ್ತಿಲ್ಲ. ಏಕೆಂದುದು ಗೊತ್ತಾಗಲಿಲ್ಲ, ಇದಕ್ಕೆ ಕೇಂದ್ರ ಸರ್ಕಾರದಲ್ಲಿ ಪ್ರಭಾವವಿಲ್ಲವೆಂದು ಕಾಣುತ್ತದೆ. ಅಲ್ಲದೆ ಕೇಂದ್ರದವರು ಈ ವಿಚಾರದಲ್ಲಿ ಮುಲತಾಯಿ ಧೋರಣೆಯಿಂದ ನೋಡುತ್ತಿದ್ದಾರೆ ಎಂದು ಹೇಳ ಬೇಕಾಗುತ್ತದೆ. ನಮ್ಮ ಸರ್ಕಾರದವರು ಎಲ್ಲಿಯತನಕ ಕೇಂದ್ರದ ಮೇಲೆ ಒತ್ತಾಯ ತರುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಕಡೆ ಮೇಜರ್ ಇರಿಗೇಷನ್ ಆಗಲೀ, ಮೈನರ್ ಇರಿಗೇಷನ್ ಆಗಲೀ, ಮೀಡಿಯಂ ಇರಿಗೇಷನ್ ಆಗಲೀ ಆಗುವುದಿಲ್ಲ. ಇದು ಸತ್ಯವಾದ ಮಾತು. ನೀವು ಕೇಂದ್ರ ಸರ್ಕಾರದ ಕ್ಯಾಬಿನೆಟ್‌ನಲ್ಲಿ ನಮ್ಮ ರಾಜ್ಯಕ್ಕೆ ಒಂದು ಜಾಗವನ್ನು ಕೊಡಿ ಎಂದು ಕೇಳಬೇಕು. ಈಗ ನಮ್ಮ ಗೋಳನ್ನು ಅಲ್ಲಿ ಯಾರಿಗೆ ಹೇಳುವುದು. ಒತ್ತಾಯ ತರುವುದಕ್ಕೆ ಹೇಗೆ ಸಾಧ್ಯವಾಗುತ್ತದೆ. ಯಾರಾದರೂ ಒಬ್ಬರು ಇದ್ದರೆ ನಮಗೆ ಬೇಕಾದ ಅನುಕೂಲತೆಗಳನ್ನು ದೊರಕಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಮೊನ್ನೆ ತಾನೆ ಶ್ರೀಮಾನ್ ಆಲೂರು ಹನುಮಂತಪ್ಪನವರು 300 ಇರಿಗೇಷನ್ ಯೋಜನೆಗಳನ್ನು ತೆಗೆದುಕೂಳ್ಳುತ್ತೇವೆ, ಮತ್ತು ಅನೇಕ ವ್ಯಾಜಿಕ್ಟ್‌ಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಆದರೆ ಅವುಗಳನ್ನು ಕಾರ್ಯರೂಪಕ್ಕೆ ತೆಗೆದುಕೊಳ್ಳಲು ಚೆಕ್ಕೆಕರ್ ಕ್ಲಿಯರೆನ್ಸ್ ಸಿಕ್ಕಿಲ್ಲ ಎಂದು ಹೇಳಿದರು. ಅದು ಹೇಗೆ ಸಿಗುತ್ತದೆ, ಎಲ್ಲಿ ಸಿಗುತ್ತದೆ ಎಂದು ಹೇಳಿದರೆ ನಾವೆಲ್ಲಾ 208 ಎಂ.ಎಲ್.ಎ.ಗಳು ಹೋಗಿ ತೆಗೆದುಕೊಂಡು ಬರುತ್ತೇವೆ. ಏನು ಬೇಕಾದರೂ ಮಾಡಿ ತರುತ್ತೇವೆಂದು ಶ್ರೀಮಾನ್ ವೀರೇಂದ್ರ ಪಾಟೀಲರಿಗೆ ಹೇಳುತ್ತೇನೆ. ಇಲ್ಲದಿದ್ದರೆ ನೀವು 15 ಜನ ಮಂತ್ರಿಗಳು ಕೇಂದ್ರ ಸರಕಾರಕ್ಕೆ ಹೋಗಿ ನಮ್ಮ ಮೈಸೂರು ಸಂಸ್ಥಾನಕ್ಕೆ ಬರಬೇಕಾದ ಫಂಡನ್ನು ಕೊಡುವವರೆಗೂ ಮತ್ತೆ ವಾಪಸ್ ಹೋಗುವುದಿಲ್ಲವೆಂದು ಹೇಳಿ. ನಿಮ್ಮ ಸಹಾಯಕ್ಕೆ

(ಶ್ರೀ ಎಸ್. ವಿ. ಅಗ್ನಿಹೋತ್ರಿ)

ಬೇಕಾದರೆ ನಾವುಗಳೂ ಸಹ ಹಿಂದಿನಿಂದ ಬರುತ್ತೇವೆ ಎಂಬ ಆಶ್ವಾಸನೆಯನ್ನು ಕೊಡುತ್ತೇವೆ. ನಮ್ಮ ಧಾರವಾಡ ತಾಲ್ಲೂಕಿನಲ್ಲಿ 360 ಕೆರೆಗಳು ಇವೆ. ಇವುಗಳನ್ನು ಜನರು ಕಟ್ಟಿಕೊಂಡಿದ್ದು, ಅಥವಾ ದೇವರೇ ನಿರ್ಮಿಸಿದ ಕೆರೆಗಳು. ಸರ್ಕಾರದವರು ಒಂದನ್ನೂ ಕಟ್ಟಿಸಿಲ್ಲ. ಕೆಲವು ಕೆರೆಗಳು ಒಡೆದಿವೆ, ಅವುಗಳನ್ನು ಸರಿಮಾಡಿಸಿ ಎಂದು ಕೇಳಿದ್ದಕ್ಕೆ ಸರ್ಕಾರದವರು ಸರ್ವೆ ಮಾಡಿಸುತ್ತಿದ್ದೇವೆ ಎಂದು ಹೇಳಿದರು. ಮತ್ತೊಂದು ಸಾರಿ it is under investigation ಎಂದು ಹೇಳಿದರು. ನಾವು ಎಷ್ಟು ದಿವಸದವರೆಗೆ ಜನರಿಗೆ ಸಮಾಧಾನ ಹೇಳುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಮುಂದಿನ ವರ್ಷ ಚುನಾವಣೆ ಬರುತ್ತದೆ. ಇವುಗಳನ್ನು ನಾವು ಮಾಡಿಸಿಕೊಡದಿದ್ದರೆ ಚುನಾವಣೆಯನ್ನು ಯಾವ ರೀತಿ ಎದುರಿಸಬೇಕು. ಅವರಿಗೆ ಯಾವ ರೀತಿ ಹೇಳುವುದಕ್ಕಾಗುತ್ತದೆ ? ಇದರಿಂದ ನಿಮಗೂ ತೊಂದರೆ, ನಮಗೂ ತೊಂದರೆ ಎಂದು ಹೇಳುತ್ತೇನೆ. ಆದಷ್ಟು ಜಾಗ್ರತೆ ಈ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಬಂದರು ವಿಷಯ ಹೇಳಬೇಕೆಂದರೆ, ಕಾರವಾರ ಬಂದರನ್ನು ಪೋರ್ಚುಗೀಸರು ಇದ್ದಾಗ ಅವರು ನಮ್ಮದು ಎಂದು ಹೇಳುತ್ತಿದ್ದರು. ಮಹಾರಾಷ್ಟ್ರದವರು ನಮ್ಮದು ಎಂದು ಹೇಳುತ್ತಿದ್ದರು. 25 ವರ್ಷಗಳಿಂದಲೂ ಈ ಕಾರವಾರ ಬಂದರನ್ನು ತೆಗೆದುಕೊಂಡಿಲ್ಲ. ಇದು ಒಂದು ನ್ಯಾಚುರಲ್ ಬಂದರು, ಕೇಂದ್ರ ಸರ್ಕಾರದವರನ್ನು ಕೇಳಿ ಆದಷ್ಟು ಜಾಗ್ರತೆ ಇದರ ಕೆಲಸವನ್ನು ತೆಗೆದುಕೊಳ್ಳಬೇಕೆಂದು ನಿಮಗೆ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಈಗಾಗಲೇ ಮಂಗಳೂರಿನಲ್ಲಿ ಒಂದು ಬಂದರನ್ನು ಮಾಡಿಕೊಟ್ಟಿದ್ದೀರಿ. ದಿವಂಗತ ರಾ'ಬಹದ್ದೂರ್ ಶಾಸ್ತ್ರಿಗಳು ಅವರ ಉದ್ಘಾಟನೆಯನ್ನು ಮಾಡಿದರು. ಶ್ರೀಮಾನ್ ಕೊಳ್ಕೆಬೈರ್ ಮತ್ತು ದಿವಂಗತ ಶ್ರೀನಿವಾಸಮಲ್ಯರು ಬೆಳತಂಗಡಿ ಸದಸ್ಯರು ಇವರ ಒಂದು ಪ್ರಯತ್ನದಿಂದ ಮಂಗಳೂರು ಬಂದರಿನ ಕೆಲಸ ಬಹಳ ಜಾಗ್ರತೆಯಾಯಿತು. ಈ ರೀತಿಯ ಒಂದು ಪ್ರಯತ್ನ ಮಾಡುವ ಜನರು ನಮ್ಮ ಧಾರವಾಡದಲ್ಲಿ ಇದ್ದಾರೋ ಇಲ್ಲವೋ ಎನ್ನುವ ಒಂದು ಸಂಶಯ ಬರುತ್ತದೆ. ಬಿಜಾಪುರದ ಬಗ್ಗೆ ನಾನು ಏನೂ ಹೇಳುವುದಿಲ್ಲ, ಧಾರವಾಡ, ಕಾರವಾರ, ಮತ್ತು ಉತ್ತರ ಕರ್ನಾಟಕ ಇವುಗಳ ಸ್ಥಿತಿ ಗತಿಗಳನ್ನು ಹೇಳುತ್ತೇನೆ. ಶ್ರೀಮಾನ್ ಜತ್ತಿಯವರು ಮುಖ್ಯಮಂತ್ರಿಗಳಾದಾಗ ನಮ್ಮ ಕಡೆ ಹೆಚ್ಚಿನ ಕೆಲಸಗಳು ಆಗಲಿಲ್ಲ; ಶ್ರೀಮಾನ್ ಕಂರಿಯವರು ಮುಖ್ಯಮಂತ್ರಿಗಳಾದಾಗಲೂ ಹೆಚ್ಚಿನ ಕೆಲಸಗಳು ಆಗಲಿಲ್ಲ ; ಈಗ ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾದ ಮೇಲಾದರೂ ಏನಾದರೂ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇವರು ಬಿಜಾಪುರದಿಂದಲೇ ಚುನಾಯಿತರಾಗಿದ್ದಾರೆ. ಬಿಜಾಪುರದ ಜನರ ವಿಶೇಷ ಪ್ರಭಾವ ಇದೆ. ನನಗೂ ಸಂತೋಷ. ಅವರಿಗೆ ಅನುಕೂಲಗಳನ್ನು ಮಾಡಿಕೊಡುವಾಗ ನಮಗೂ ಸ್ವಲ್ಪ ಮಾಡಿ ಕೊಡಿ. ನಮಗೂ ಸ್ವಲ್ಪ ಊಟ ಹಾಕಿ, ನಮ್ಮ ಹೊಟ್ಟೆಯೂ ಸ್ವಲ್ಪ ತುಂಬಲಿ, ಎಲ್ಲವನ್ನೂ ಅವರಿಗೇ ತಿನ್ನಿಸಿದರೆ ಅಜೀರ್ಣವಾಗುತ್ತದೆ. ನಮ್ಮ ಪ್ರದೇಶವೂ ಸ್ವಲ್ಪ ಮುಂದುವರಿಯುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ಇನ್ನು ಈಗ ಎಲ್ಲಿಗೆ ಹೋದರು ಜನರು ನೋಡುವುದೆಂದರೆ ಮತ್ತು ಹೇಳುವುದೆಂದರೆ ಆಹಾರ ಪರಿಸ್ಥಿತಿ ಕೆಟ್ಟಿದೆ ಎಂದು. ಅದು ಸತ್ಯಕ್ಕೆ ದೂರವಾದ ಮಾತು. ಮಾನ್ಯ ವಿರೋಧ ಪಕ್ಷದ ಸದಸ್ಯರಿಗೆ ಆ ರೀತಿ ಕಾಣಬಹುದು. ಆದರೆ ಪರಿಸ್ಥಿತಿ ಅಷ್ಟೊಂದು ಕೆಟ್ಟಿಲ್ಲ. ಸರ್ಕಾರದವರು ಉತ್ತಮವಾದ ರಸ್ತೆಗಳನ್ನು, ಸರಿಯಾದ, ಎಲ್ಲರಿಗೂ ಕಾಣುವಂತಹ ದೀಪಗಳನ್ನು, ಉತ್ತಮವಾದ ಇರಿಗೇಷನ್ ಫೆಸಿಲಿಟೀಸ್, ದೊಡ್ಡ ದೊಡ್ಡ ಪ್ರಾಜೆಕ್ಟ್ಸುಗಳನ್ನು, ಇತರ ಎಲ್ಲಾ ಸೌಕರ್ಯಗಳನ್ನೂ ಜನರಿಗೆ ಮಾಡಿಕೊಟ್ಟರೆ ಯಾವ ಮಂತ್ರಿಮಂಡಲದವರನ್ನು ಬೇಕಾದರೂ ಜನ ಹೊಗಳುತ್ತಾರೆ. ಜನರಿಗೂ ಒಂದು ರೀತಿಯಾದ ಸಂತೋಷವಾಗುತ್ತದೆ. ಧಾರವಾಡ ಜಿಲ್ಲೆಯಲ್ಲಿರುವ ಟಿ.ಬಿ.ಗಳು ಒಂದಾನೊಂದು ಕಾಲಕ್ಕೆ ಕಟ್ಟಿದವು. ಅವುಗಳಲ್ಲಿ ಹೆಚ್ಚಿನ ಸೌಕರ್ಯಗಳು ಇಲ್ಲ. ಈಗ ಇರುವ ಕಟ್ಟಡಗಳಿಗೆ ಪ್ರತಿವರ್ಷ ಸುಣ್ಣ ಬಣ್ಣ ಹಾಕಿಸಿ, ಅವುಗಳನ್ನೇ ಉಪಯೋಗಿಸುತ್ತಿದ್ದಾರೆ. ಈಗ ಧಾರವಾಡಕ್ಕೆ ಬರುವ ಟೂರಿಸ್ಟ್‌ಗಳ ಸಂಖ್ಯೆ, ಆಫೀಸರ್ಸ್‌ಗಳ ಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ ಈಗ ಹಾಲ್ ಇರುವ ಟಿ.ಬಿ. ಬಂಗಲೆಗಳನ್ನು ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್‌ಗೆ ಒಪ್ಪಿಸಿ, ಹೊಸ ಜಾಗದಲ್ಲಿ ಬಹಳ ಉತ್ತಮವಾದ ರೀತಿಯಲ್ಲಿ ಟಿ.ಬಿ.ಯನ್ನು ಕಟ್ಟಿಸಬೇಕೆಂದು ಕೇಳಿಕೊಳ್ಳುತ್ತೇನೆ. ಧಾರವಾಡ ಒಂದು ಸುಸಂಸ್ಕೃತವಾದ ನಗರ. ಅದು ನ್ಯಾಷನಲ್ ಹೈವೆಯಲ್ಲದೆ. ವ್ಯಾಪಾರ ಸ್ಥಳವಲ್ಲ ಇಲ್ಲಿ ಒಂದು ವಿಶ್ವವಿದ್ಯಾನಿಲಯವಿದೆ. ಇಲ್ಲಿಂದಲೇ ಬೇರೆ ಸ್ಥಳಗಳಿಗೆ ಹೋಗಬೇಕು. ಗೋವಕ್ಕೆ ಹೋಗಬೇಕಾದರೂ, ಜೋಗಿಗೆ ಹೋಗಬೇಕಾದರೂ ಎಲ್ಲಮನ ಗುಡ್ಡಕ್ಕೆ ಹೋಗಬೇಕಾದರೂ, ಅಲಮಟ್ಟಿಗೆ ಹೋಗಬೇಕಾದರೂ ಧಾರವಾಡಕ್ಕೆ ಬಂದೇ ಹೋಗಬೇಕು. ಇದರಿಂದ ಧಾರವಾಡಕ್ಕೆ ಬರುವವರ ಸಂಖ್ಯೆ ಜಾಸ್ತಿಯಾಗಿದೆ. ಇವೆರ್ನಾ ಕಾರಣಗಳಿಂದ ಧಾರವಾಡ

ದಲ್ಲಿ ಟಿ.ಬಿ.ಯನ್ನು ಹೊಸದಾಗಿ ಕಟ್ಟಿಸಲು ಹೆಚ್ಚು ಲಕ್ಷ ಕೊಡಬೇಕು. ಧಾರವಾಡ ಹುಬ್ಬಳ್ಳಿಗೆ ನೀರು ಸರಬರಾಜು ಮಾಡುವ ಒಂದು ನೀರ ನಾಗರ ಕೆರೆ ಇದೆ. ಇದರ ಬಳಿಗೆ ಅನೇಕ ಜನರು ಪಿಕ್‌ನಿಕ್‌ಗೆ ಬರುತ್ತಾರೆ. ಇದರ ಬಳಿ ಒಂದು ಟಿ.ಬಿ.ಯನ್ನು ಕಟ್ಟಿಸಿದರೆ ಎಲ್ಲರಿಗೂ ಒಳ್ಳೆಯ ಅನುಕೂಲವಾಗುತ್ತದೆ. ಜಾಗ್ರತೆ ಕಟ್ಟಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ರೂರಲ್ ವಾಟರ್ ಸಪ್ಲೈ ವಿಚಾರವನ್ನು ತಜ್ಞರಿಗೆ ನೇಮಿಸಿದಿರಿ. ಅವರು ಇನ್‌ವೆಸ್ಟಿಗೇಷನ್ ಸರ್ವೆ ಮಾಡಿ ಮುಗಿಸಿದ್ದಾರೆ. ಆದರೆ ಅದನ್ನು ನೀವು ಇನ್ನೂ ತೆಗೆದುಕೊಂಡಿಲ್ಲ. ಸರ್ವೆ ಕಂಪ್ಲೀಟ್ ಆಗಿದೆ. ಅಷ್ಟು ತ್ವರಿತವಾಗಿ ಈ ಕೆಲಸವನ್ನು ತೆಗೆದುಕೊಳ್ಳುತ್ತಾರೆ ಎಂದು ನಂಬಿದ್ದೇನೆ.

ಧಾರವಾಡ ತಾಲ್ಲೂಕಿನ ರಸ್ತೆಗಳ ಬಗ್ಗೆ ಹೇಳಬೇಕಾದರೆ, ಈ ತಾಲ್ಲೂಕಿನ ಮುಖ್ಯ ರಸ್ತೆಯು ನವದತ್ತಿವರೆಗೂ ಹೋಗುತ್ತದೆ. ಧಾರವಾಡ—ಬ್ಯೆಲಹೊಂಗಲ ರಸ್ತೆಯನ್ನು ದೊಡ್ಡದಾಗಿ ಮಾಡುತ್ತಿದ್ದು ಸಿಮೆಂಟ್ ಕಾಂಕ್ರೀಟ್ ಹಾಕಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ರೋಡುಗಳ ಮಧ್ಯೆ ಸುಮಾರು 70—80 ಹಳ್ಳಿಗಳು ಇವೆ. ಇವುಗಳಿಗೆಲ್ಲಾ ಅನುಕೂಲವಾಗುತ್ತದೆ. ಧಾರವಾಡ—ನವಲಗುಂದ ರೋಡ್ ಧಾರವಾಡದಿಂದ ನವಿಲಗುಂದಕ್ಕೆ ಹೋಗುವುದಕ್ಕೆ ಅನುಕೂಲವಾಗುತ್ತದೆ ಮತ್ತು ಧಾರವಾಡದಿಂದ ನವಲಗುಂದಕ್ಕೆ ಹೋಗುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಧಾರವಾಡದಿಂದ ನವಲಗುಂದಕ್ಕೆ ಹುಬ್ಬಳ್ಳಿಯನ್ನು ಬಳಸಿಕೊಂಡು ಹೋಗುವುದು ತಪ್ಪುತ್ತದೆ.

ಅದನ್ನು ಮಾಡಿದರೆ, ಅನೇಕ ಹಳ್ಳಿಗಳಿಂದ ಮಾಲುಗಳನ್ನು ಹಳ್ಳಿಯವರು ಶಹರಕ್ಕೆ ತರುವುದಕ್ಕೆ ತೊಂದರೆಯಾಗುವುದಿಲ್ಲ. ಟಿ. ಬಿ. ಬೋರ್ಡಿನವರಿಗೆ ಕೇವಲ ಎರಡು ಲಕ್ಷ ಮೂರು ಲಕ್ಷ ಸರ್ಕಾರದವರು ಕೊಡುವುದರಿಂದ, ಎಲ್ಲಾ ಅಪ್ರೋಚರೋಡ್ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಯಾರೂ ತೆಗೆದುಕೊಳ್ಳುವುದಿಲ್ಲ. ತಾಲ್ಲೂಕು ಬೋರ್ಡಿನವರಿಗಾದರೂ ತೆಗೆದುಕೊಳ್ಳಬೇಕೆಂದು ಹೇಳಬೇಕು ಹೆಚ್ಚು ಹಣ ಕೊಡಬೇಕು. ಮಾತನಾಡಲು ನನಗೆ ಹೆಚ್ಚು ಸಮಯ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

